21 June 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಆರೋಗ್ಯ, ಆಯಸ್ಸು, ಅಧಿಕಾರ,ಸಂಪತ್ತು, ಸಮಯ ಇವೆಲ್ಲಾ ಶಾಶ್ವತವಲ್ಲ ಜೀವನದಲ್ಲಿ!

▸▸ ಸ್ನೇಹಾ ಆನಂದ್

info.varthaman@gmail.com



ಅಹಿಂದ ವರ್ಗಗಳಿಗೆ ಕಾಂಗ್ರೆಸ್‌ನಿಂದ ಅನ್ಯಾಯ — ಪುಟ ಸಂ. 2



ಸಮ ಸಮಾಜ ನಿರ್ಮಾಣದಲ್ಲಿ ಶರಣರ ಕೊಡುಗೆ ಅಪಾರ — ಪುಟ ಸಂ. 3



ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಗುಣಮಟ್ಟದ ಶಿಕ್ಷಣ ಅತ್ಯಗತ್ಯ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 204 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಮೌನದ ಒಡಲಲ್ಲಿ ಪ್ರೀತಿಯ ಕಡಲು: ಅಪ್ಪ ಎಂಬ ಅಲಿಖಿತ ಮಹಾಕಾವ್ಯ



▸▸ ಶ್ರೀರಾಮ್ ಎಸ್ ಬೆಳವಾಡಿ

ಜೂನ್ ತಿಂಗಳ ಮೂರನೇ ಭಾನುವಾರ ಬಂತೆಂ ದರೆ ಜಗತ್ತಿನಾದ್ಯಂತ ತಂದೆಯರ ದಿನದ ಸಂಭ್ರಮದ ಅಲೆ ಏಳುತ್ತದೆ. ಸಾಮಾಜಿಕ ಜಾಲತಾಣಗಳ ಗೋಡೆಗಳ ಮೇಲೆ ಅಪ್ಪನೊಂದಿಗಿನ ಸೆಲ್ಫಿಗಳು, ಹಳೆಯ ಭಾವಚಿತ್ರಗಳು ಮತ್ತು ಭಾವುಕ ಸಾಲುಗಳ ಮಹಾಪೂರವೇ ಹರಿಯತೊಡಗುತ್ತದೆ. ಆದರೆ, ಅಪ್ಪ ಎಂಬ ಎರಡಕ್ಷರದ ಅಸ್ತಿತ್ವವನ್ನು, ಅವರ ಇಡೀ ಬದುಕಿನ ತ್ಯಾಗವನ್ನು ಕೇವಲ ಒಂದು ದಿನದ ಆಚರಣೆಗೆ ಅಥವಾ ಕೆಲವು ಗಂಟೆಗಳ ಜಾಲತಾಣದ ಸ್ಟೇಟಸ್‌ಗಳಿಗೆ ಸೀಮಿತಗೊಳಿಸಲು ಸಾಧ್ಯವೇ ಇಲ್ಲ. ಅಮ್ಮನ ಪ್ರೀತಿ ಕಣ್ಣಿಗೆ ಕಾಣುವ ಕಣ್ಣೀರಿನಂತಿದ್ದರೆ, ಅಪ್ಪನ ಪ್ರೀತಿ ಕಣ್ಣಿಗೆ ಕಾಣದ ಕಣ್ಣ ರೆಪ್ಪೆಯಂತಿರುತ್ತದೆ. ಇಡೀ ಕುಟುಂ ಬವನ್ನು ಬಿಸಿಲು, ಮಳೆ, ಬಿರುಗಾಳಿಗಳಿಂದ ಕಾಯುವ ಒಂದು ಹೆಮ್ಮರ ಅಥವಾ ಆಲದ ಮರದಂತೆ ನಿಲ್ಲುವ ಅಪ್ಪ, ಎಂದಿಗೂ ತಾನು ಪಡುವ ಕಷ್ಟವನ್ನು ಹೊರಗೆ ತೋರ್ಪಡಿಸಿಕೊಳ್ಳುವುದಿಲ್ಲ. ತಲೆಯ ಮೇಲಿನ ಜವಾಬ್ದಾರಿಯ ಹೊರೆ ಎಷ್ಟು ಭಾರವಾಗಿದ್ದರೂ, ಸಂಜೆಯೋ ಅಥವಾ ರಾತ್ರಿಯೋ ಮನೆಗೆ ಮರಳುವಾಗ ಅವರ ಕೈಯಲ್ಲಿರುವ ಸಣ್ಣದೊಂದು ಮಲ್ಲಿಗೆ ಹೂವಿನ ಪೊಟ್ಟಣದ ಹಿಂದೆ ಅಥವಾ ಮಕ್ಕಳಿಗಾಗಿ ತರುವ ತಿಂಡಿಯ ಕವರಿನ ಹಿಂದೆ ಆ ತಂದೆಯ ಇಡೀ ಜಗತ್ತೇ ಅಡಗಿರುತ್ತದೆ. ಹೊರಗಿನ ಪ್ರಪಂಚಕ್ಕೆ ಕಟ್ಟುನಿಟ್ಟಿನ, ಗಂಭೀರ ವ್ಯಕ್ತಿಯಂತೆ ಕಾಣುವ ಅಪ್ಪನ ಒಳಗೊಂದು ಮಗುವಿನಂತಹ ಅತ್ಯಂತ ಮೃದುವಾದ ಮನಸ್ಸಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಬದುಕಿನ ಒಂದು ನಿರ್ದಿಷ್ಟ ವಯಸ್ಸು ಮತ್ತು ಪಕ್ವತೆ ಬರಬೇಕಾಗುತ್ತದೆ.




ಒಬ್ಬ ಮನುಷ್ಯ ತಂದೆಯಾದಾಗ ಅವನ ಇಡೀ ವ್ಯಕ್ತಿತ್ವವೇ ಬದಲಾಗಿಬಿಡುತ್ತದೆ. ಅಲ್ಲಿಯವರೆಗೆ ತನ್ನ ಆಸೆ, ಆಕಾಂಕ್ಷೆ, ಗೆಳೆಯರು ಮತ್ತು ಮನರಂಜನೆಯಲ್ಲೇ ಮುಳುಗಿದ್ದ ಯುವಕನೊಬ್ಬ, ಮಗುವಿನ ಅಳು ಕೇಳಿದ ಕ್ಷಣದಿಂದಲೇ ತನ್ನ ವೈಯಕ್ತಿಕ ಬದುಕನ್ನು ಮರೆತುಬಿಡುತ್ತಾನೆ. ಅಪ್ಪಂದಿರ ಪ್ರೀತಿಯ ಶೈಲಿಯೇ ಜಗತ್ತಿನಲ್ಲಿ ಅತ್ಯಂತ ವಿಭಿನ್ನ ಹಾಗೂ ನಿಗೂಢವಾದದ್ದು. ಅವರು ಪ್ರೀತಿಯನ್ನು ಮಾತಿನಲ್ಲಿ ಹೇಳುವುದಿಲ್ಲ, ದಿನಕ್ಕೆ ನೂರು ಬಾರಿ ಪ್ರೀತಿ ಯಿಂದ ಅಪ್ಪಿಕೊಳ್ಳುವುದಿಲ್ಲ ಅಥವಾ ಮುದ್ದಿಸುವುದಿಲ್ಲ. ಬದಲಿಗೆ, ತಮ್ಮ ಕಠಿಣ ಪರಿಶ್ರಮದಲ್ಲಿ, ಬೆವರಿನ ಹನಿ ಗಳಲ್ಲಿ ಮತ್ತು ದಿನದ ಇಪ್ಪತ್ತನಾಲ್ಕು ಗಂಟೆಯ ಜವಾ ಬ್ದಾರಿಯಲ್ಲಿ ಆ ಪ್ರೀತಿಯನ್ನು ತೋರಿಸುತ್ತಾರೆ. ಹರಿದ ಚಪ್ಪಲಿಯನ್ನು ಹೊಲಿಸಿಕೊಂಡು ಧರಿಸುತ್ತಾ, ಸವೆದು ಹೋದ ಹಳೆಯ ಅಂಗಿಯನ್ನೇ ತೊಟ್ಟು ವರ್ಷಗಟ್ಟಲೆ ಕಳೆಯುವ ಅಪ್ಪ, ಮಕ್ಕಳ ಶಾಲೆಯ ಶುಲ್ಕಕ್ಕೆ, ಅವರ ಹೊಸ ಉಡುಪುಗಳಿಗೆ ಅಥವಾ ಅವರ ಸಣ್ಣಪುಟ್ಟ ಆಸೆಗಳಿಗೆ ಮಾತ್ರ ಎಂದೂ ಕೊರತೆ ಮಾಡುವುದಿಲ್ಲ. ತನ್ನದೇ ಆದ ಕನಸುಗಳನ್ನು ಹೂತುಹಾಕಿ, ಮಕ್ಕಳ ಕನಸುಗಳಿಗೆ ನೀರೆ ರೆದು ಪೋಷಿಸುವ ಅಪ್ಪನ ಈ ನಿರಂತರ ತ್ಯಾಗಕ್ಕೆ ಜಗ ತ್ತಿನ ಯಾವುದೇ ತಕ್ಕಡಿಯಲ್ಲೂ ಬೆಲೆ ಕಟ್ಟಲು

ಪುಟ 2ಕ್ಕೆ

## ಅಕ್ಕಿ ಬೆಲೆ ಗಗನಕ್ಕೆ: ಜನರಿಗೆ ಮತ್ತೊಂದು ಶಾಕ್



**ಮೈಸೂರು:** ಪೆಟ್ರೋಲ್, ಡೀಸೆಲ್, ಗ್ಯಾಸ್ ಹಾಗೂ ತರಕಾರಿ ಬೆಲೆ ಏರಿಕೆಯ ನಡುವೆಯೇ ಇದೀಗ ಅಕ್ಕಿ ಬೆಲೆ ಗಗನಕ್ಕೇರಿದೆ. ವಿವಿಧ ತಳಿಯ ಅಕ್ಕಿ ದರದಲ್ಲಿ ಕೆ.ಜಿಗೆ 10ರಿಂದ 20 ರೂಪಾಯಿವರೆಗೆ ಏರಿಕೆಯಾಗಿದೆ. ಇದರಿಂದ ಗ್ರಾಹಕರ ಜೇಬಿಗೆ ಮತ್ತಷ್ಟು ಹೊರೆ ಬಿದ್ದಂತಾಗಿದೆ.

ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದ್ದು, ಪೂರೈಕೆ ಕಡಿಮೆಯಾಗಿದೆ. ಇದರ ಜೊತೆಗೆ ವಿವಿಧ ದೇಶಗಳಿಗೆ ಅಕ್ಕಿ ರಫ್ತು ಮಾಡಲು ಕೇಂದ್ರ ಸರ್ಕಾರ ಅವಕಾಶ ನೀಡಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ಅಕ್ಕಿಯ ಲಭ್ಯತೆ ಕಡಿಮೆಯಾಗಿದೆ. ಈ ಕಾರಣದಿಂದ ಬೆಲೆ ಏರಿಕೆಯಾಗುತ್ತಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಸದ್ಯಕ್ಕೆ ಸ್ಟೀಮ್ ರೈಸ್ ಕೆ.ಜಿಗೆ 42ರಿಂದ 56 ರೂಪಾಯಿಗೆ ಏರಿಕೆಯಾಗಿದೆ. ರಾ ರೈಸ್ 50ರಿಂದ 62 ರೂಪಾಯಿಗೆ ಹೆಚ್ಚಳವಾಗಿದೆ. ಕೋಲಂ ರೈಸ್ 68ರಿಂದ 80 ರೂಪಾಯಿಗೆ ಜಿಗಿದರೆ, ಕೋಲಂ ಸ್ಟೀಮ್ ಅಕ್ಕಿ 55ರಿಂದ 65 ರೂಪಾಯಿಗೆ ಏರಿಕೆಯಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ಸಂಕಷ್ಟದಲ್ಲಿರುವ ಜನರು, ಅಕ್ಕಿ ದರ ಹೆಚ್ಚಳದಿಂದ ಮತ್ತಷ್ಟು ತೊಂದರೆ ಅನುಭವಿಸುವಂತಾಗಿದೆ.

ಹೊಸ ಅಕ್ಕಿ ನವೆಂಬರ್ ವೇಳೆಗೆ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಅಲ್ಲಿಯವರೆಗೆ ಅಕ್ಕಿ ಕೊರತೆ ಮುಂದುವರಿಯುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ದರ ಮತ್ತಷ್ಟು ಏರಿಕೆಯಾಗುವ ಆತಂಕ ಎದುರಾಗಿದೆ.

# ‘ಪ್ರಜಾಸೇವೆ’ ಸಚಿವಾಲಯ ಸ್ಥಾಪನೆ

## ಜನಹಿತ ಆಡಳಿತಕ್ಕಾಗಿ ರಚನೆ: ಸಚಿವ ಸಂಪುಟ ಸಭೆ ನಿರ್ಣಯ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಮುಖ್ಯಮಂತ್ರಿ ಜನಸ್ಪಂದನ ಮತ್ತು ಜನಹಿತ ಆಡಳಿತಕ್ಕೆ 'ಪ್ರಜಾಸೇವೆ' ಹೆಸರಿನಲ್ಲಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆ ಬಳಿಕ ಶನಿವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ಮಾಹಿತಿ ನೀಡಿದರು. ಸಾರ್ವಜನಿಕರ ಅಹವಾಲು, ಸಮಸ್ಯೆಗಳಿಗೆ ಸ್ಪಂದಿಸಲು, ಅವರಿಗೆ ನ್ಯಾಯ ಒದಗಿಸಲು, ಅಧಿಕಾರಿಗಳ ತಪ್ಪನ್ನು ತಿದ್ದಲು ಈ ಹೊಸ ಸಚಿವಾಲಯ ರಚಿಸಲಾಗುತ್ತದೆ. ಅದಕ್ಕೆ ಪ್ರತ್ಯೇಕ ಸಚಿವರನ್ನು ನಿಯೋಜಿಸುತ್ತೇವೆ ಎಂದು ಹೇಳಿದರು.

**▸▸ ಡಿ.ಕೆ.ಶಿವಕುಮಾರ್ ಪತ್ರಿಕಾಗೋಷ್ಠಿ ಹೇಳಿಕೆ**

ಈ ಸಚಿವಾಲಯಕ್ಕೆ ಪ್ರತ್ಯೇಕವಾದ ಸಚಿವರು ಇರುತ್ತಾರೆ. ಅಲ್ಲದೆ, ಐಎಎಸ್ ಅಧಿಕಾರಿಯನ್ನು ನಿಯೋಜನೆ ಮಾಡುತ್ತೇವೆ. ಎಲ್ಲ ಸಚಿವರು, ಜಿಲ್ಲಾ ಸಚಿವರು ಪ್ರತಿ 224 ಕ್ಷೇತ್ರಗಳಿಗೆ ಪ್ರತಿ ವಾರ ಕಡ್ಡಾಯವಾಗಿ ಹೋಗಿ ಆ ತಾಲೂಕುಗಳಲ್ಲಿ ಜನಸ್ಪಂದನಾ ಸಭೆ ನಡೆಸಬೇಕು. ಜನಹಿತ ಬಹಳ ಮುಖ್ಯ. ನಾವು ಯಾರೂ ಸರ್ವಜ್ಞರಲ್ಲ. ಜನರಿಗೆ ಹಲವು ಸಮಸ್ಯೆ ಎದುರಾಗುತ್ತದೆ. ಮಾಧ್ಯಮಗಳಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಹೇಳುತ್ತಾರೆ. ಅದನ್ನೆಲ್ಲ ಸಮನ್ವಯತೆ ಮಾಡಿ ಸ್ಪಂದಿಸಲು ಈ ಸಚಿವಾಲಯದ ಮೂಲಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.



### ವಸತಿ ಕಟ್ಟಡಕ್ಕೆ ಒಸಿ ವಿನಾಯಿತಿ

**ಬೆಂಗಳೂರು:** ಮೇ 31ರ ಒಳಗೆ ಪೂರ್ಣಗೊಂಡಿರುವ ಎಲ್ಲ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡುವ ಅಗತ್ಯವಿಲ್ಲ. ಅರ್ಜಿ ಸಲ್ಲಿಸಲು ಸರ್ಕಾರಿ ಆದೇಶ ಬಂದ ದಿನದಿಂದ 15 ದಿನಗಳ ಕಾಲಾವಕಾಶ ನೀಡಲಾಗುವುದು ಎಂದು

ಪುಟ 2ಕ್ಕೆ

### ಸಚಿವ ಸಂಪುಟ ಸಭೆಯ ಪ್ರಮುಖ ನಿರ್ಣಯಗಳು

- ▸▸ ವಿಧಾನಪರಿಷತ್ತಿಗೆ ಐವರು ಸದಸ್ಯರ ನಾಮನಿರ್ದೇಶನ ಮಾಡಲು ಸಿ.ಎಂಗೆ ಅಧಿಕಾರ.
- ▸▸ ಸಚಿವ ಸಂಪುಟ ಉಪ ಸಮಿತಿ ಪುನರ್ ರಚಿಸಲು ನಿರ್ಧಾರ.
- ▸▸ ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದ ಆಸ್ಪತ್ರೆಗಳ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳನ್ನು 80 ಕೋಟಿ ಅಂದಾಜು ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ.
- ▸▸ ದೆಹಲಿಯಲ್ಲಿ ಕರ್ನಾಟಕ ಭವನ–4 ಅನ್ನು 80 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.
- ▸▸ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ 13 ಗ್ರಾಮಗಳಲ್ಲಿ ಒಟ್ಟು 1777.02 ಎಕರೆ ಜಮೀನುಗಳ ಪೈಕಿ ಸ್ವಯಂ ಪ್ರೇರಿತವಾಗಿ ಮಂಡಳಿಗೆ ಜಮೀನು ನೀಡಲು ನಿಗದಿ ಪಡಿಸಿ ಅವಧಿಯನ್ನು 31.10. 2027ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ.
- ▸▸ ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದ ನಿರ್ಮಾಣ ಕಾಮಗಾರಿ.

## ಪಡಿತರಕ್ಕೆ ‘ಜಾತಿ ಪ್ರಮಾಣ ಪತ್ರ’

### ಕಾನೂನು ಬಾಹಿರ ಕ್ರಮ: ಸಚಿವ ಪ್ರಲ್ಹಾದ ಜೋಶಿ ಕಿಡಿ



**ನವದೆಹಲಿ:** ಕರ್ನಾಟಕ ಸರ್ಕಾರ ಪಡಿತರಕ್ಕೆ 'ಜಾತಿ ಪ್ರಮಾಣ ಪತ್ರ' ಲಿಂಕ್ ಮಾಡಲು ಮುಂದಾಗಿರುವುದು ಕಾನೂನು ಬಾಹಿರ ಕ್ರಮ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಆಹಾರ ಭದ್ರತೆ ಒದಗಿಸುವಲ್ಲಿ ಯಾವುದೇ ಜಾತಿ ಲಿಂಕ್ ಮಾಡಲು ಸಾಧ್ಯವಿಲ್ಲ. ಕರ್ನಾಟಕ ಸರ್ಕಾರ ಪಡಿತರಕ್ಕೆ 'ಜಾತಿ ಪ್ರಮಾಣ ಪತ್ರ'ವನ್ನು ಕಡ್ಡಾಯಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳಲಾಗಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ 'ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ'ಯಡಿ ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆ ಎಂಬ ವಿಚಾರಕ್ಕೆ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸುವಲ್ಲಿ ಬದ್ಧತೆ ತೋರಿದೆ. ಯಾವುದೇ ಜಾತಿ, ಜನಾಂಗ ಎಂದೆಣಿಸುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಡಿತರ ಪಡೆಯಲು ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ದುರಂತವೇ ಸರಿ ಎಂದು ಟೀಕಿಸಿದರು.

ಕರ್ನಾಟಕದಲ್ಲಿ ಪಡಿತರ ಯೋಜನೆಗೆ ಜಾತಿ ಲಿಂಕ್ ಮಾಡುತ್ತಿರುವ ಬಗ್ಗೆ ಅಧಿಕಾರಿಗಳಿಂದ ವಿವರಣೆ ಪಡೆಯಲು ಕೇಂದ್ರದ ಉನ್ನತ ಅಧಿಕಾರಿಗಳಿಗೆ ನಿರ್ದೇಶಿಸಿದ್ದೇನೆ ಎಂದು ಜೋಶಿ ತಿಳಿಸಿದ್ದಾರೆ.

## ನನ್ನ ವಿರುದ್ಧ ಸ್ವಪಕ್ಷೀಯರ ಪಿತೂರಿ: ಶಾಸಕ ಶ್ರೀವತ್ಸ ಕಿಡಿ



**ಮೈಸೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಸುಳ್ಳು ವದಂತಿ ಹಬ್ಬಿಸಲಾಗುತ್ತಿದೆ. ಮತ ಚಲಾಯಿಸಲು ಬಾರದಷ್ಟು ನಾನು ಅಪ್ರಬುದ್ಧನಲ್ಲ ಎಂದು ಬಿಜೆಪಿ ಶಾಸಕ ಶ್ರೀವತ್ಸ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ನನ್ನ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ನಾನು ವಿವೇಚನೆಯಿಂದ ಮತ ಚಲಾಯಿಸಿದ್ದೇನೆ. ನನ್ನ ಮತ ಅಸಿಂಧು ಆಗಿದೆ ಎಂದು ಹೇಳಿದವರು ಯಾರು? ಇದು ಗೌಪ್ಯ ಮತದಾನ. ನನ್ನ ವಿರುದ್ಧ ನನ್ನ ಪಕ್ಷದವರೇ ಪಿತೂರಿ ನಡೆಸಿದ್ದಾರೆ. ಈ ಬಗ್ಗೆ ಸತ್ಯ ಶೋಧನ ಸಮಿತಿಯಿಂದ ಬಹಿರಂಗವಾಗಲಿದೆ ಎಂದು ಹೇಳಿದರು.

ಪುಟ 2ಕ್ಕೆ

# ಶೀಘ್ರ ಬಸ್ ಟಿಕೆಟ್ ದರ ಹೆಚ್ಚಳ

## ಡೀಸೆಲ್ ಬೆಲೆ ಏರಿಕೆ ಹಿನ್ನೆಲೆ: ಸಿಎಂ ಡಿ.ಕೆ.ಶಿವಕುಮಾರ್ ಸುಳಿವು

**ಬೆಂಗಳೂರು:** ರಾಜ್ಯದ ಜನತೆಗೆ ಶೀಘ್ರದಲ್ಲೇ ಮತ್ತೊಂದು ಬೆಲೆ ಏರಿಕೆ ಬಿಸಿ ತಟ್ಟಲಿದೆ. ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಬಸ್ ಟಿಕೆಟ್ ದರ ಹೆಚ್ಚಿಸಲು ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ.

ವಿಧಾನಸೌಧದಲ್ಲಿ ಶನಿವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ಡೀಸೆಲ್ ಬೆಲೆ ತೀವ್ರ ಹೆಚ್ಚಾಗಿದೆ. ಡಿಪೋ ಬೆಲೆಗೂ, ಖಾಸಗಿ ಸಿಗುವ ಡೀಸೆಲ್ ಬೆಲೆಗೂ ಅಜಗಾಂತರ ವ್ಯತ್ಯಾಸ ಇದೆ ಎಂದು ಹೇಳಿದರು. ಅಲ್ಲದೆ, ಪರೋಕ್ಷವಾಗಿ ಬಸ್ ಪ್ರಯಾಣ ದರ ಹೆಚ್ಚಳದ ಸುಳಿವು ನೀಡಿದ್ದಾರೆ.

ಡೀಸೆಲ್ ದರ ನೋಡಿದರೆ ಗಾಬರಿಯಾಗುತ್ತದೆ. ಈ ಬಗ್ಗೆ ವರದಿ ಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕೆಎಸ್‌ಆರ್‌ಟಿಸಿ ಉಳಿಸಬೇಕು, ಜನರಿಗೂ ಹೊರೆಯಾಗಬಾರದು. ರಾಜ್ಯದ ಹಿತಕ್ಕಾಗಿ ನಾವು ಈ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಿಎಂ ಸ್ಪಷ್ಟಪಡಿಸಿದರು.



### ಡಿನೋಟಿಫೈ ಮಾಡಿ ಜೈಲಿಗೆ ಹೋಗಲು ತಯಾರಿಲ್ಲ: ಸಿಎಂ

**ಬೆಂಗಳೂರು:** ಬಿಡದಿ ಟೌನ್ ಶಿಪ್‌ಗೆ ಜೆಡಿಎಸ್ ವಿರೋಧದ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ನಾನು ಈ ಬಗ್ಗೆ ಮಾತನಾಡಲ್ಲ. ಹಿಂದೆ ಕುಮಾರಸ್ವಾಮಿ, ಯಡಿಯೂರಪ್ಪ

ಪುಟ 2ಕ್ಕೆ

ಟಿಕೆಟ್ ದರ ಹೆಚ್ಚಳಕ್ಕೆ ಸಾರಿಗೆ ಇಲಾಖೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಶೀಲನೆ ನಡೆಸುತ್ತಿದೆ. ಡಿಪೋಗಳಲ್ಲಿ ಖರೀದಿಸುವ ಡೀಸೆಲ್ ಮತ್ತು ಖಾಸಗಿಯಾಗಿ ಲಭ್ಯವಿರುವ ಡೀಸೆಲ್ ಬೆಲೆಗಳ ನಡುವೆ ಸುಮಾರು 40 ರೂ. ವ್ಯತ್ಯಾಸವಿದೆ. ಈ ಬೆಲೆ ವ್ಯತ್ಯಾಸದಿಂದ ಕೆಲವು ಖಾಸಗಿ ಸಾರಿಗೆ ನಿರ್ವಾಹಕರು ಡಿಪೋದಿಂದ ಡೀಸೆಲ್ ಖರೀದಿಸುವುದನ್ನು ಬಿಟ್ಟಿದ್ದಾರೆ. ಸಾರ್ವಜನಿಕ ಪೆಟ್ರೋಲ್

ಪುಟ 2ಕ್ಕೆ

## ತುಮಕೂರಿಗೆ ಚತುಷ್ಪಥ ರೈಲು ಮಾರ್ಗ

### ಶೀಘ್ರದಲ್ಲೇ ಕಾಮಗಾರಿ ಆರಂಭ: ಕೇಂದ್ರ ಸಚಿವ ವಿ.ಸೋಮಣ್ಣ



**ತುಮಕೂರು:** ಬೆಂಗಳೂರು ಮತ್ತು ತುಮಕೂರು ನಡುವೆ ಶೀಘ್ರದಲ್ಲೇ ಚತುಷ್ಪಥ ರೈಲು ಮಾರ್ಗ ಕಾಮಗಾರಿ ಆರಂಭಿಸುವುದಾಗಿ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು–ತುಮಕೂರು ನಡುವೆ ಚತುಷ್ಪಥ ರೈಲು ಮಾರ್ಗ ನಿರ್ಮಾಣದ ಪೂರ್ವ ಸಿದ್ಧತೆ ಕಾರ್ಯ ಚುರುಕಾಗಿವೆ ಎಂದು ಹೇಳಿದರು.

ಬೆಂಗಳೂರು ಮತ್ತು ತುಮಕೂರು ನಡುವೆ ಸದ್ಯ ಕೇವಲ ಎರಡು ಪಥಗಳ ರೈಲ್ವೆ ಹಳಿ ಇರುವುದರಿಂದ ರೈಲುಗಳ ಸಂಚಾರ ವಿಳಂಬವಾಗುತ್ತಿದೆ. ಇದನ್ನು ನಾಲ್ಕು ಪಥಗಳ ರೈಲು ಮಾರ್ಗವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಕೇಂದ್ರ ಸಚಿವರು ತಿಳಿಸಿದರು.

ಈ ಉದ್ದೇಶಿತ ಬೃಹತ್ ಯೋಜನೆಗಾಗಿ ಈಗಾಗಲೇ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ. ಅಲ್ಲದೆ, ರೈಲ್ವೆ ಇಲಾಖೆ ಅತ್ಯುನ್ನತ ತಾಂತ್ರಿಕ ಸಮಿತಿಯು ಈ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಿದೆ. ಸದ್ಯ ಈ ಪ್ರಕ್ರಿಯೆ ರೈಲ್ವೆ ಮಂಡಳಿಯ ಅಂತಿಮ ಒಪ್ಪಿಗೆಯ ಹಂತದಲ್ಲಿದೆ. ಬೋರ್ಡ್ ಮುದ್ರೆ ಬೀಳುತ್ತಿದ್ದಂತೆ ಯೋಜನೆ ಅಧಿಕೃತವಾಗಿ ಕಾರ್ಯರೂಪಕ್ಕೆ ಬರಲಿದೆ ಎಂದು ಸೋಮಣ್ಣ ತಿಳಿಸಿದರು.

ಅಂದಾಜು 6,000 ಕೋಟಿ ರೂಪಾಯಿಗೂ ಅಧಿಕ ವೆಚ್ಚದಲ್ಲಿ ಈ ಚತುಷ್ಪಥ ರೈಲು ಮಾರ್ಗದ ಬೃಹತ್ ಮೂಲಸೌಕರ್ಯ ಕಾಮಗಾರಿ ನಡೆಯಲಿದೆ. ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಭೂಮಿಯನ್ನು ಗುರುತಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಮುಂದಿನ ಐದಾರು

ಪುಟ 2ಕ್ಕೆ

## ದೂರ ಶಿಕ್ಷಣದಿಂದ ಮಹಿಳಾ ಸಬಲೀಕರಣ

### ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಭಿಪ್ರಾಯ



**ಮೈಸೂರು:** ಸಮಾಜದ ಪ್ರತಿ ವರ್ಗಕ್ಕೂ ಶಿಕ್ಷಣ ತಲುಪಿಸುವಲ್ಲಿ ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆ ಮಹತ್ವದ ಪಾತ್ರ ವಹಿಸುತ್ತಿದೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) ಶನಿವಾರ ಆಯೋಜಿಸಿದ್ದ 'ಪ್ರವೇಶದಿಂದ ಶ್ರೇಷ್ಠತೆಯೆಡೆಗೆ: ದೂರ ಶಿಕ್ಷಣದ ಭವಿಷ್ಯದ ಹಾದಿಗಳು' ವಿಷಯದ ಶೈಕ್ಷಣಿಕ ಸಭೆ ಹಾಗೂ ಮಾಜಿ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ರಚಿಸಿರುವ 'ಶಿಕ್ಷಣ: ಔಪಚಾರಿಕ, ಮುಕ್ತ ಮತ್ತು ದೂರಶಿಕ್ಷಣದ ಅವಲೋಕನ' ಕೃತಿ ಬಿಡುಗಡೆ ಸಮಾರಂಭದಲ್ಲಿ ರಾಜ್ಯಪಾಲರು ಮಾತನಾಡಿದರು.

ಮಹಿಳಾ ಸಬಲೀಕರಣದಲ್ಲಿ ದೂರ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತಿದೆ. ಕುಟುಂಬದ ಜವಾಬ್ದಾರಿಗಳಿಂದ ಅನೇಕ ಮಹಿಳೆಯರು ನಿಯಮಿತ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ದೂರ ಶಿಕ್ಷಣದ ಮೂಲಕ

# ಈ ಬಾರಿ ದಸರಾದಲ್ಲಿ ಕಂಬಳದ ರಂಗು


## ಮೊದಲ ಬಾರಿಗೆ ಕರಾವಳಿ ಕ್ರೀಡೆ ಆಯೋಜನೆಗೆ ಜಿಲ್ಲಾಡಳಿತ ಸಿದ್ಧತೆ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಮೊದಲ ಬಾರಿಗೆ ಕರಾವಳಿಯ ಕಂಬಳ ಕ್ರೀಡೆಯನ್ನು ವಿಶೇಷ ಆಕರ್ಷಣೆಯಾಗಿ ಆಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಪೂರ್ವಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ವರ್ಷವೇ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ, ಸರಿಯಾದ ಸ್ಥಳ ದೊರೆಯದ ಕಾರಣ ಸಾಧ್ಯವಾಗಲಿಲ್ಲ ಎಂದು ಹೇಳಿದರು.

ಈ ಬಾರಿ ಆಯೋಜನೆಗಾಗಿ 3 ತಿಂಗಳಿಗೆ ಮುಂಚಿತವಾಗಿಯೇ ತಯಾರಿ ಆರಂಭಿಸಲಾಗಿದೆ. ವಿಜಯನಗರ ಮೊದಲನೇ ಹಂತ, ವಿಜಯನಗರ 4ನೇ ಹಂತ ಹಾಗೂ ಸಾತಗಳ್ಳಿ ವರ್ತುಲ ರಸ್ತೆಯ ಬಳಿ ಸೇರಿದಂತೆ ಮೂರು ಸ್ಥಳ ಗುರುತಿಸಲಾಗಿದೆ. ಇದರಲ್ಲಿ ಒಂದು ಸ್ಥಳವನ್ನು ಆಯ್ಕೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಜಾಗ ಬೇಕಿದೆ. ಪಾರ್ಕಿಂಗ್ ವ್ಯವಸ್ಥೆಗೆ, ವೀಕ್ಷಕರ ಗ್ಯಾಲರಿ ನಿರ್ಮಾಣಕ್ಕೆ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಾದಷ್ಟು ಸ್ಥಳ ಲಭ್ಯವಿದೆಯೇ ಎಂಬುದನ್ನು ಪರಿಶೀಲಿಸಿ ನಿರ್ಧರಿಸಲಾಗುವುದು ಎಂದು ಅವರು ತಿಳಿಸಿದರು.



ಜಿ.ಪಂ. ಸಿಇಒ ಎಸ್.ಯುಕೇಶ್‌ಕುಮಾರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ರಾಜ್ಯ ಕಂಬಳ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯ್‌ಕುಮಾರ್, ಬೆಂಗ ಳೂರು ಕಂಬಳ ಕಾರ್ಯಾಧ್ಯಕ್ಷ ಮುರಳೀಧರ್ ರೈ ಪಾಲ್ಗೊಂಡಿದ್ದರು.

### ಮುಖ್ಯಮಂತ್ರಿ ಡಿಕೆಶಿ ಸೂಚನೆ

ಹಿಂದಿನ ದಸರಾ ಸಂದರ್ಭ ಉಪ ಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರು, ನಾಡಹಬ್ಬದಲ್ಲಿ ಹಳೆಯ ಒಂದಷ್ಟು ಪದ್ಧತಿಗಳನ್ನು ಕೈಬಿಟ್ಟು ಹೊಸ ಪೀಳಿಗೆಯನ್ನು ಸೆಳೆಯುವಂತೆ ಕಾರ್ಯಕ್ರಮ ಆಯೋಜಿಸುವ ಕುರಿತು ಚರ್ಚೆ ನಡೆಸಲಾಗಿದೆ. ಕಂಬಳ ನಮ್ಮ ರಾಜ್ಯದ ಕರಾವಳಿ ಭಾಗ

ಪುಟ 2ಕ್ಕೆ

# ಅಹಿಂದ ವರ್ಗಗಳಿಗೆ ಕಾಂಗ್ರೆಸ್‌ನಿಂದ ಅನ್ಯಾಯ

## ವಿಧಾನಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಆರೋಪ | ಬಿಜೆಪಿ ಕಚೇರಿಯಲ್ಲಿ ಅಭಿನಂದನೆ ಕಾರ್ಯಕ್ರಮ

ಮೈಸೂರು: ಕಾಂಗ್ರೆಸ್ ಪಕ್ಷವು ಅಹಿಂದ ಹೆಸರು ಹೇಳಿಕೊಂಡು ಅವರ ಮತ ಗಳಿಸಿಕೊಳ್ಳುತ್ತಿದೆಯೇ ಹೊರತು ಆ ವರ್ಗದವರಿಗೆ ಔದ್ಯೋಗಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ನ್ಯಾಯ ದೊರಕಿಸುವ ಕೆಲಸವನ್ನು ಮಾಡಿಲ್ಲ ಎಂದು ವಿಧಾನಪರಿಷತ್ ಸದಸ್ಯ ಆರ್. ರಘು ಕೌಟಿಲ್ಯ ಆರೋಪಿಸಿದರು.

ಬಿಜೆಪಿ ಕಚೇರಿಯಲ್ಲಿ ಶನಿವಾರ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ?ನಿಜವಾಗಿಯೂ ಸಾಮಾಜಿಕ ಬದ್ಧತೆ ಇರುವುದು ಬಿಜೆಪಿಯಲ್ಲಿ ಮಾತ್ರ. ಅತಿ ಸಣ್ಣ ಸಮುದಾಯಗಳವರಿಗೆ ರಾಜಕೀಯವಾಗಿ ಅವಕಾಶ ಕೊಡುತ್ತಿದೆ. ಗ್ರಾಮ ಪಂಚಾಯಿತಿ ಚುನಾವಣೆ ಗೆಲ್ಲುವುದಕ್ಕೂ ಸಾಧ್ಯವಿಲ್ಲದವರಿಗೆ ವಿಧಾನಸಭೆ, ಲೋಕಸಭೆಗೆ ಕಳುಹಿಸುವ ಕೆಲಸವನ್ನು ಪಕ್ಷ ಮಾಡುತ್ತಿದೆ. ಮೈಸೂರು ಭಾಗದಲ್ಲಿ ಸಂಘಟನೆ ಬಲಗೊಳಿಸಲು ಹಾಗೂ ಸಾಮಾಜಿಕ ನ್ಯಾಯ ಕಲ್ಪಿಸಲು ಪಕ್ಷವು ನನಗೆ ಅವಕಾಶ ಮಾಡಿಕೊಟ್ಟಿದೆ? ಎಂದರು. ನಾನು ಬಿಜೆಪಿಗೆ ಬಂದು 12 ವರ್ಷಗಳು ಕಳೆದಿವೆ. ಕ್ರಿಯಾಶೀಲ ಕಾರ್ಯಕರ್ತರಿಗೆ ಪ್ರಾಮಾಣಿಕವಾಗಿ ಅವಕಾಶ ಕೊಡುತ್ತದೆ ಎನ್ನುವುದಕ್ಕೆ ನಾನೊಬ್ಬ ಉದಾಹರಣೆ. ಎರಡು ಬಾರಿ ವಿಧಾನಪರಿಷತ್ ಚುನಾವಣೆಯಲ್ಲಿ ಟಿಕೆಟ್ ಸಿಕ್ಕಿತ್ತು, ಕೊನೆ ಕ್ಷಣದಲ್ಲಿ ಸೋತಿದ್ದೆ. ಇದರಿಂದಾಗಿ ವೈಯಕ್ತಿಕ ಬದುಕಿನಲ್ಲಿ ಅನೇಕ ಕಷ್ಟ ನಷ್ಟಗಳು ಎದುರಾಗಿದ್ದವು. ಆದರೆ, ನನ್ನಂತಹ ಕಾರ್ಯಕರ್ತ ಪಾತಾಳಕ್ಕೆ ಬಿದ್ದರೂ ಬಿಜೆಪಿ ಮೇಲೆತ್ತುತ್ತದೆ ಎಂಬ ಆತ್ಮವಿಶ್ವಾಸ ಇತ್ತು. ಅವಕಾಶದ ಬಾಗಿಲು ತೆಗೆದುಕೊಡುವ ಬದ್ಧತೆ, ಸಿದ್ಧತೆ ಹಾಗೂ ಕಾರ್ಯಸೂಚಿ ಇರುವ ಪಕ್ಷ ಎಂಬುದನ್ನು ವರಿಷ್ಠರು ಮತ್ತೊಮ್ಮೆ ನಿರೂಪಿಸಿದ್ದಾರೆ. ಮಾತೃಹೃದಯದಿಂದ ನಡೆದುಕೊಂಡಿದ್ದಾರೆ. ಹಲವು ಅವಕಾಶಗಳನ್ನು ನೀಡಿದ್ದಾರೆ. ನನ್ನ ಕಡೆಯ ಉಸಿರು ಇರುವವರೆಗೂ ಪಕ್ಷದ ಕೆಲಸ ಮಾಡುವುದಕ್ಕೆ ಹೆಮ್ಮೆಯಾಗುತ್ತದೆ. ಇದಕ್ಕಾಗಿ ಋಣಿ ಆಗಿರುತ್ತೇನೆ. ರಾಜ್ಯದಾದ್ಯಂತ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಹೋರಾಡುತ್ತಿದ್ದು, ಅದನ್ನು ಮುಂದುವರಿಸುತ್ತೇನೆ ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ರಘು ಕೌಟಿಲ್ಯ ಅವರು ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವುದು ನಮಗೆ ಅಚ್ಚರಿಯನ್ನೇನೂ ತಂದಿಲ್ಲ. ಎಲ್ಲರೂ ಅದನ್ನು ನಿರೀಕ್ಷಿಸಿದ್ದರು. ಅವರ ಹೋರಾಟಕ್ಕೆ ಸೂಕ್ತ ಮನ್ನಣೆಯನ್ನು ಪಕ್ಷ ನೀಡಿದೆ. ಅತಿ ಸಣ್ಣ ಸಮುದಾಯವನ್ನು ಪ್ರತಿನಿಧಿಸುವ ಅವರು, ಅನೇಕ ಕಾಯಕ ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡಲಿದ್ದಾರೆ. ಒಬಿಸಿ ವರ್ಗದಲ್ಲೂ ಒಳ್ಳೆಯ ರೀತಿಯಲ್ಲಿ ಸಂಘಟನೆ ಆಗಬೇಕಾಗಿದೆ. ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳು ಸೇರಿದಂತೆ ಎಲ್ಲ ಕಡೆಯೂ ಈ ಕೆಲಸ ಆಗಬೇಕಾಗಿದೆ ಎಂದು ಆಶಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ, ಮೈಸೂರು ವಿಭಾಗದ ಪ್ರಭಾರಿ ಸ್ವಾಮಿ ಮರಳಾಪುರ, ಸಹ ಪ್ರಭಾರಿ ಇ.ಸಿ.ನಿಂಗರಾಜ್ ಗೌಡ, ಮಾಜಿ ಮೇಯರ್ ಶಿವಕುಮಾರ್, ಸಂದೇಶ್ ಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಮುಖಂಡ ಅರುಣ್ ಕುಮಾರ್, ಮುಖಂಡ ಎಂ. ಅಪ್ಪಣ್ಣ, ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಬಿ.ಎಂ.ಸಂತೋಷ್ ಕುಮಾರ್ ಇನ್ನಿತರರು ಪಾಲ್ಗೊಂಡಿದ್ದರು.

ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ಮಾತನಾಡಿ, ಉಪ್ಪು ತಿಂದವರು ನೀರು ಕುಡಿಯಲೇಬೇಕು. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಕುದುರೆ ವ್ಯಾಪಾರ ಮಾಡಿದೆ. ಕೆಲ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಈ ಬಗ್ಗೆ ಸತ್ಯಶೋಧನಾ ಸಮಿತಿ ರಚಿಸಿದೆ. ಅಡ್ಡ ಮತದಾನ ಮಾಡಿರುವವರನ್ನು ಪತ್ತೆ ಹಚ್ಚಲಾಗುತ್ತದೆ. ನನ್ನಂತೆಯೇ ಅತಿ ಹಿಂದುಳಿದ ನಾಯಕರನ್ನು ಪಕ್ಷ ಗುರುತಿಸಿ ಸ್ಥಾನ ಕಲ್ಪಿಸಿದೆ. ಎರಡು ಬಾರಿ ಎಂಎಲ್ಸಿ ಚುನಾವಣೆಯಲ್ಲಿ ಸೋತಿದ್ದ ನನ್ನನ್ನು ಪಕ್ಷ ಈಗ ಎಂಎಲ್ಸಿ ಮಾಡಿದೆ. ಇದಕ್ಕೆ ಪಕ್ಷದ ಹಿರಿಯ ನಾಯಕರು ಕಾರಣರು. ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.




### ನನ್ನ ಪಕ್ಷದವರೇ ಪಿತೂರಿ: ಶಾಸಕ ಶ್ರೀವತ್ಸ

**ಮೈಸೂರು:** ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಸುಳ್ಳು ವದಂತಿ ಹಬ್ಬಿಸಲಾಗುತ್ತಿದೆ. ಆದರೆ, ನಾನು ಮತ ಚಲಾಯಿಸದಷ್ಟು ಅಪ್ರಬುದ್ಧನಲ್ಲ, ಈ ಬಗ್ಗೆ ಸತ್ಯ ಶೋಧನ ಸಮಿತಿಯಿಂದ ಬಹಿರಂಗವಾಗಲಿದೆ. ನನ್ನ ವಿರುದ್ಧ ನನ್ನ ಪಕ್ಷದವರೇ ಪಿತೂರಿ ನಡೆಸಿದ್ದಾರೆ ಎಂದು ಬಿಜೆಪಿ ಶಾಸಕ ಶ್ರೀವತ್ಸ ಕಿಡಿಕಾರಿದರು.

ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ಅವರಿಗೆ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಳಿಕ ಮಾತನಾಡಿ, ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಸುಳ್ಳು ವದಂತಿ ಹಬ್ಬಿಸಿದ್ದಾರೆ. ಇದೊಂದು ವ್ಯವಸ್ಥಿತ ಷಡ್ಯಂತ್ರ. ನಾನು ಮತ ಚಲಾಯಿಸಲು ಆಗದಷ್ಟು ಅಪ್ರಬುದ್ಧನಲ್ಲ. ನಾನು ವಿವೇಚನೆಯಿಂದ ಮತ ಚಲಾಯಿಸಿದ್ದೇನೆ. ನನ್ನ ಮತ ಅಸಿಂಧು ಆಗಿದೆ ಎಂದು ಹೇಳಿದವರು ಯಾರು ಈ ಬಗ್ಗೆ ಚುನಾವಣೆ ಆಯೋಗ ಏನಾದರೂ ತಿಳಿಸಿದೆಯಾ. ಇದು ಗೌಪ್ಯ ಮತದಾನ ಆಗಿದೆ. ನನ್ನ ವಿರುದ್ಧ ನನ್ನ ಪಕ್ಷದವರೇ ಪಿತೂರಿ ನಡೆಸಿದ್ದಾರೆ ಎಂದರು.

ಪತ್ರಿಕೆಯೊಂದಕ್ಕೆ ನನ್ನ ಬಗ್ಗೆ ಇದೇ ರೀತಿ ಬರೆಯಿರಿ ಎಂದು ಹೇಳಿ ಬರೆಸಿದ್ದಾರೆ. ಎಲ್ಲವನ್ನು ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಅಡ್ಡ ಮತದಾನ ನಡೆದಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದಕ್ಕೆ ಸತ್ಯಶೋಧನಾ ಸಮಿತಿ ರಚಿಸಿದೆ. ಸದ್ಯದಲ್ಲೇ ಎಲ್ಲ ಬಹಿರಂಗ ಆಗಲಿದೆ ಎಂದು ಖಾರವಾಗಿಯೇ ನುಡಿದರು.

> **ನಾಯಕತ್ವಕ್ಕೆ ಸಂಬಂಧವಿಲ್ಲ**
>
> ವಿಧಾನ ಪರಿಷತ್ ಆಯ್ಕೆ ವೇಳೆ ನಡೆದ ಅಡ್ಡ ಮತದಾನಕ್ಕೂ ಪಕ್ಷದ ನಾಯಕತ್ವಕ್ಕೂ ಯಾವುದೇ ಸಂಬಂಧವಿಲ್ಲ. ರಾಜಕೀಯದಲ್ಲಿ ಇವೆಲ್ಲಾ ಸಹಜ ಪ್ರಕ್ರಿಯೆ. ಇಲ್ಲಿ ಹಿನ್ನಡೆ, ಮುಜುಗರ ಎಂಬುದು ಬರುವುದಿಲ್ಲ. ಆದರೂ ಪಕ್ಷ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಪಕ್ಷದ ಚೌಕಟ್ಟಿನಲ್ಲಿ ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಿದೆ. ಆರ್‌ಎಸ್‌ಎಸ್ ಕುರಿತು ಗೃಹ ಸಚಿವರಾಗಿ ಪ್ರಶ್ನಿಸುವ ಹಕ್ಕು ಪ್ರಿಯಾಂಕ ಖರ್ಗೆಯವರಿಗಿದೆ. ಅದಕ್ಕೆ ಉತ್ತರಿಸುವ ಅಗತ್ಯವಿಲ್ಲ.
>
> –**ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್** ಸಂಸದ


ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ವಿದ್ಯಾ ಚೌಡೇಶ್ವರಿ ಮಠದ ಶ್ರೀ ವಿದ್ಯಾನಂದ ಸ್ವಾಮಿ ಹೇಳಿಕೆ

# ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮಕುಂಭಾಭಿಷೇಕ ಮಹೋತ್ಸವ

ರಾಮನಗರ: ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮಕುಂಭಾಭಿಷೇಕ ಮಹೋತ್ಸವವನ್ನು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಶ್ರೀಗಳು ನಡೆಸಿಕೊಡಲಿದ್ದಾರೆ ಎಂದು ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ವಿದ್ಯಾ ಚೌಡೇಶ್ವರಿ ಮಠದ ಶ್ರೀ ವಿದ್ಯಾನಂದ ಸ್ವಾಮಿ ತಿಳಿಸಿದರು.

ಈ ಸಂಬಂಧ ಶನಿವಾರ ನಗರದ ಶ್ರೀ ಬಲಮುರಿ ಗಣಪತಿ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ತಿಂಗಳಲ್ಲಿ ಧರ್ಮ ವಿಜಯ ಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಪ್ರಯುಕ್ತ ರಾಮನಗರಕ್ಕೆ ಭೇಟಿ ನೀಡಲಿದ್ದು, ಶ್ರೀ ಬಲಮುರಿ ಗಣಪತಿ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿರುವ ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಜೂ.27ರ ಶನಿವಾರ ಸಂಜೆ ರಾಮನಗರಕ್ಕೆ ಶ್ರೀಗಳು ಆಗಮಿಸಲಿದ್ದು, ಅವರನ್ನು ರಾಮನಗರ ರಾಜಬೀದಿಯಲ್ಲಿ ಪೂರ್ಣಕುಂಭಸ್ವಾಗತದೊಂದಿಗೆ ಭರ ಮಾಡಿಕೊಳ್ಳಲಾಗುತ್ತದೆ. ರಾಜಬೀದಿಯಲ್ಲಿ ಅವರನ್ನು ರಥದ ಮೂಲಕ ಕರೆ ತಂದು ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತದೆ. ಅಂದು ಸಂಜೆ ಪಾದಪೂಜೆ ನಡೆಸಲಾಗುತ್ತದೆ ಎಂದು ಹೇಳಿದರು.



ಭಾನುವಾರ ಬೆಳಗ್ಗೆ 8ಗಂಟೆಗೆ ಶ್ರೀ ಚಂದ್ರಮೌಳೇಶ್ವರ ಪೂಜೆ ನಡೆಸಲಿದ್ದಾರೆ. ಇದಾದ ಬಳಿಕ ಚತುರ್ದಶಿ ಮಹಾಕುಂಭಾಭಿಷೇಕದ ಅಂಗವಾಗಿ ಹೋಮ ನಡೆಯಲಿದ್ದು, ಜಗದ್ಗುರುಗಳ ಅಮೃತ ಹಸ್ತದಿಂದ ಶ್ರೀ ಬಲಮುರಿ ಮಹಾಗಣಪತಿ ಬ್ರಹ್ಮ ಕುಂಭಾಭಿಷೇಕ ಹಾಗೂ ಮಹಾಪೂಜೆ ನಡೆಯಲಿದೆ. ನಂತರ ಗುರುಗಳಿಂದ ಅನುಗ್ರಹ ಭಾಷಣ ಹಾಗೂ ಫಲ ಮಂತ್ರಾಕ್ಷತೆ, ನೀಡಲಿದ್ದಾರೆ. ಜತೆಗೆ ಅನ್ನಸಂತರ್ಪಣೆಯನ್ನ ಸಹ ಏರ್ಪಡಿಸಲಾಗಿದೆ ಎಂದರು.

ಜಗದ್ಗುರುಗಳು ಜೂನ್ ತಿಂಗಳಿನಲ್ಲಿ ಧರ್ಮ ವಿಜಯ ಯಾತ್ರೆಯನ್ನು ಹಮ್ಮಿಕೊಂಡಿದ್ದು, ರಾಮನಗರದಿಂದಲೇ ವಿಜಯ ಯಾತ್ರೆಯನ್ನು ಆರಂಭ ಮಾಡಲಿದ್ದಾರೆ. ರಾಮನಗರವೂ ಐತಿಹಾಸಿಕವಾಗಿ ಹಾಗೂ ಪೌರಾಣಿಕವಾಗಿ ಸಾಕಷ್ಟು ಹಿನ್ನೆಲೆಯನ್ನು ಹೊಂದಿದೆ. ಹಾಗಾಗಿ ದೇವಾಲಯದ ಮಂಡಳಿ ಅವರು ದೇವಾಲಯದ ಮಹಾ ಕುಂಭಾಭಿಷೇಕ ಮಹೋತ್ಸವಕ್ಕೆ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಗುರುಗಳು ಸಹ ಖುಷಿಯಿಂದಲೇ ಕಾರ್ಯಕ್ರಮದಲ್ಲಿ ಭಾಗಿ ಯಾಗುವುದಾಗಿ ತಿಳಿಸಿದ್ದಾರೆ ಎಂದರು.

ಜಗದ್ಗುರುಗಳ ಆಗಮನದ ಹಿನ್ನೆಲೆಯಲ್ಲಿ ದೇವಾಲಯದ ಆಡಳಿತ ಮಂಡಳಿ ವತಿಯಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶನಿವಾರ ರಾತ್ರಿ ಜಗದ್ಗುರುಗಳು ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಲಮುರಿ ಗಣಪತಿ ದೇವಾಲಯದ ಪ್ರಧಾನ ಅರ್ಚಕ ಗಣೇಶ್ ಭಟ್, ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ಟಿ.ರಂಗರಾಜು. ಖಜಾಂಚಿ ಬಿಕೆಕೆ ಹರ್ಷವರ್ಧನ್, ಪ್ರಮುಖರಾದ ಪಿ.ವಿ.ಪ್ರಭಾಕರ್, ಆರ್.ವಿ.ಸುರೇಶ್, ಬಿಜೆಪಿ ಮಂಜು, ಕುಮಾರ್, ಮಾಲ್ತೇಶ್, ಚೇತನ್ ಗೌಡ, ರಾಹುಲ್ ರೆಡ್ಡಿ, ಹೆಚ್. ಎಲ್.ಚೇತನ್, ಸ್ವರ್ಣೇಶ್, ಪುರುಷೋತ್ತಮ ರೆಡ್ಡಿ, ಅಕ್ಷಯ್, ಕಿರಣ್, ಮೋಹಿತ್, ಶಿವಕುಮಾರ್ ಮತ್ತಿತರರು ಇದ್ದರು.

## ಮೊದಲ ಪುಟದಿಂದ

### ದೂರ ಶಿಕ್ಷಣದಿಂದ ಮಹಿಳಾ ಸಬಲೀಕರಣ

ಅವರು ಮನೆಯಿಂದಲೇ ಶಿಕ್ಷಣವನ್ನು ಪಡೆದು ಸ್ವಾವಲಂಬಿಗಳಾಗಬಹುದು ಎಂದರು. ಇದೇ ರೀತಿ ಅಂಗವಿಕಲರು ಹಾಗೂ ಸಮಾಜದ ಹಿಂದುಳಿದ ವರ್ಗಗಳ ಅಭಿವೃದ್ಧಿಗೂ ಇದು ಮಹತ್ವದ ಕೊಡುಗೆ ನೀಡುತ್ತದೆ ಎಂದು ಹೇಳಿದರು.

ಜ್ಞಾನವನ್ನು ಸಾರ್ವತ್ರಿಕಗೊಳಿಸುವ ಮತ್ತು ಶಿಕ್ಷಣವನ್ನು ಪ್ರಜಾಪ್ರಭುತ್ವೀಕರಿಸುವ ದೃಷ್ಟಿಕೋನವನ್ನು ಮುಕ್ತ ವಿವಿ ಪ್ರತಿಬಿಂಬಿಸುತ್ತದೆ. ಶಿಕ್ಷಣ ಕ್ಷೇತ್ರವು ತಂತ್ರಜ್ಞಾನ, ಡಿಜಿಟಲ್ ಸಂಪನ್ಮೂಲಗಳು ಮತ್ತು ನವೀನ ಬೋಧನಾ ವಿಧಾನಗಳಿಂದ ಅಭೂತಪೂರ್ವ ಬದಲಾವಣೆಗಳನ್ನು ಅನುಭವಿಸುತ್ತಿದೆ. ಇದರಿಂದ ಶಿಕ್ಷಣ ಹೆಚ್ಚು ಸುಲಭವಾಗಿ ಲಭ್ಯವಾಗುವ, ಸಮಗ್ರ ಮತ್ತು ಪರಿಣಾಮಕಾರಿ ವ್ಯವಸ್ಥೆಯಾಗಿ ರೂಪುಗೊಂಡಿದೆ. ವಿಶೇಷವಾಗಿ, ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಗಳು ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನದ ಬಾಗಿಲುಗಳನ್ನು ತೆರೆದಿವೆ ಎಂದು ಅವರು ತಿಳಿಸಿದರು.

ಜಗತ್ತು ಇಂದು ಜ್ಞಾನಾಧಾರಿತ ಆರ್ಥಿಕತೆಯತ್ತ ಸಾಗುತ್ತಿರುವ ಸಂದರ್ಭದಲ್ಲಿ, ಭಾರತವು ಸಮಗ್ರ ಮತ್ತು ಮಾನವೀಯ ಮೌಲ್ಯಗಳ ಆಧಾರಿತ ಶಿಕ್ಷಣ ಮಾದರಿಯನ್ನು ಜಗತ್ತಿಗೆ ನೀಡುವ ಅವಕಾಶವನ್ನು ಹೊಂದಿದೆ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು

ಆದಿಚುಂಚನಗಿರಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ ಶ್ರೀ, ಮಾಜಿ ಕುಲಪತಿ ಪ್ರೊ.ಎನ್.ಎಸ್. ರಾಮೇಗೌಡ, ಶಾಸಕ ಕೆ.ಹರೀಶ್ ಗೌಡ, ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ. ಹಾಲ್ಸೆ ಇತರರು ಭಾಗವಹಿಸಿದ್ದರು.

### ಚತುಷ್ಪಥ ರೈಲು ಮಾರ್ಗ

ತಿಂಗಳುಗಳ ಅವಧಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ಸಹ ಅಧಿಕೃತವಾಗಿ ಆರಂಭವಾಗಲಿದೆ ಎಂದು ವಿ.ಸೋಮಣ್ಣ ಹೇಳಿದರು.

ಈ ನಾಲ್ಕು ಪಥಗಳ ಮಾರ್ಗ ಪೂರ್ಣಗೊಂಡರೆ ಎಕ್ಸ್‌ಪ್ರೆಸ್ ಮತ್ತು ಪ್ಯಾಸೆಂಜರ್ ರೈಲುಗಳು ಯಾವುದೇ ಸಿಗ್ನಲ್ ಕಾಯುವಿಕೆಯಿಲ್ಲದೆ ಸಂಚರಿಸಬಹುದಾಗಿದೆ. ಬೆಂಗಳೂರು– ತುಮಕೂರು ನಡುವಿನ ಪ್ರಯಾಣದ ಸಮಯ ಅರ್ಧಕ್ಕರ್ಧ ಕಡಿಮೆ ಆಗಲಿದೆ.

### ನನ್ನ ವಿರುದ್ಧ ಸ್ವಪಕ್ಷೀಯರ ಪಿತೂರಿ:

ನಮ್ಮ ಪಕ್ಷದ ಕೆಲವರು ಪತ್ರಿಕೆಯೊಂದಕ್ಕೆ ನನ್ನ ಬಗ್ಗೆ ಇದೇ ರೀತಿ ಬರೆಯಿರಿ ಎಂದು ಹೇಳಿ ಬರೆಸಿದ್ದಾರೆ. ಎಲ್ಲವನ್ನೂ ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಅಡ್ಡ ಮತದಾನ ನಡೆದಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದಕ್ಕೆ ಸತ್ಯಶೋಧನಾ ಸಮಿತಿ ರಚಿಸಿದೆ. ಸದ್ಯದಲ್ಲೇ ಎಲ್ಲ ಬಹಿರಂಗ ಆಗಲಿದೆ ಎಂದು ಖಾರವಾಗಿಯೇ ನುಡಿದರು.

### ಮುಖ್ಯಮಂತ್ರಿ ಡಿಕೆಶಿ ಸೂಚನೆ

ವಿಶೇಷವಾದ ಆಚರಣೆ. ಹೀಗಾಗಿ ಕಂಬಳವನ್ನು ದಸರಾದಲ್ಲಿ ಸೇರಿಸಲಾಗುವುದು. ಈ ಕ್ರೀಡೆ ನಡೆಸಲು ಅಗತ್ಯವಾದ ಸ್ಥಳ ಹುಡುಕುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದ್ದರು. ಈಗ ಅವರೇ ಮುಖ್ಯಮಂತ್ರಿಯಾಗಿರುವ ಹಿನ್ನೆಲೆಯಲ್ಲಿ ಕಂಬಳ ಆಯೋಜನೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದ ಕಾರಣ ಜಿಲ್ಲಾಡಳಿತ ಕಂಬಳ ಆಯೋಜನೆಗೆ ಮುಂದಾಗಿದೆ.

### ವಸತಿ ಕಟ್ಟಡಕ್ಕೆ ಒಸಿ ವಿನಾಯಿತಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ವಿಧಾನಸೌಧದಲ್ಲಿ ಶನಿವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಭಾವಚಿತ್ರ ಮತ್ತು ಜಿಪಿಎಸ್ ದಾಖಲೆಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಹೇಳಿದರು.

ಗ್ರಾಮೀಣ ಭಾಗದ, ರೇಷ್ಮೆ ಸಾಕಾಣಿಕೆ ಮನೆ, ಕೊಟ್ಟಿಗೆಗಳಿಗೆ ಈ ವಿನಾಯಿತಿ ನೀಡಲಾಗಿದೆ. ಆದರೆ, ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ. ಈ ಕುರಿತು ಇಂಧನ, ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಸಚಿವರ ಜೊತೆ ವಿವರವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

### ಡಿನೋಟಿಫೈ ಮಾಡಿ ಜೈಲಿಗೆ ಹೋಗಲು ತಯಾರಿಲ್ಲ: ಸಿಎಂ

ಮುಖ್ಯಮಂತ್ರಿ ಆಗಿದ್ದಾಗ ಏನು ಮಾಡಿದ್ದರೋ ಅದನ್ನು ನಾನು ಮುಂದುವರೆಸುತ್ತಿದ್ದೇನೆ ಅಷ್ಟೇ. ರಾಜಕಾರಣಕ್ಕಾಗಿ ಅವರು ಇದೆಲ್ಲಾ ಮಾತನಾಡುತ್ತಿದ್ದಾರೆ. ಅವರು ಹೇಗೆ ರೆಡ್ ಜೋನ್ ಮಾಡಿದರು. ಯಾರಿಗೂ ನಾನು ಜಮೀನು ಕೊಡಿ ಎಂದು ಬಲವಂತ ಮಾಡುತ್ತಿಲ್ಲ. ಭೂಮಿ ಡಿನೋಟಿಫೈ ಮಾಡಿ ನಾನು ಜೈಲಿಗೆ ಹೋಗಲು ತಯಾರಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

### ಬಸ್ ಟಿಕೆಟ್ ದರ ಹೆಚ್ಚಳ

ಬಂಕ್‌ಗಳಿಂದ ಡೀಸೆಲ್ ಹಾಕಿಸಿಕೊಳ್ಳುತ್ತಿದ್ದಾರೆ ಎಂದರು.

ಕೆಎಸ್‌ಆರ್‌ಟಿಸಿಯನ್ನು ಉಳಿಸಿಕೊಳ್ಳುವ ಜೊತೆಗೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಮತೋಲಿತ ನಿರ್ಧಾರ ತೆಗೆದುಕೊಳ್ಳುವ ಅಗತ್ಯವಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಡೀಸೆಲ್ ಬೆಲೆ ಹೆಚ್ಚಾದಾಗ ಸ್ವಯಂಚಾಲಿತವಾಗಿ ಸಾರಿಗೆ ದರ ಹೆಚ್ಚಳ ಮಾಡುವ ತೀರ್ಮಾನವಿತ್ತು. ಪ್ರಧಾನ ಮಂತ್ರಿ ಸಾರ್ವಜನಿಕ ಸಾರಿಗೆಯನ್ನು ಬಳಸಲು ಮನವಿ ಮಾಡಿರುವ ಹಿನ್ನೆಲೆಯಲ್ಲಿ, ರಾಜ್ಯ ಮತ್ತು ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ನಿರ್ಧಾರ ಪ್ರಕಟಿಸುವುದಾಗಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ
ಮಾಧ್ಯಮ

### ಪುಟ್ ಬಾಲ್ ಪಂದ್ಯಾವಳಿ

ಗುಂಡ್ಲುಪೇಟೆ. ಪಟ್ಟಣದ ಕ್ರೈಸ್ಟ್ ಸಿ ಎಂ ಐ ಪಬ್ಲಿಕ್ ಶಾಲೆಯಲ್ಲಿ ಫಿಫಾ ವಿಶ್ವ ಕಪ್ ಫುಟ್ಬಾಲ್ ಪ್ರಯುಕ್ತ ಕ್ರೈಸ್ಟ್ ಶಾಲೆಯ ಅಂತರ ವಲಯ ಪುಟ್ ಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು

ಪಂದ್ಯಾವಳಿಯನ್ನು ಶಾಲೆಯ ಪ್ರಾಂಶುಪಾಲರಾದ ರೆವರೆಂಡ್ ಫಾದರ್ ರಿಜೀಶ್ ಪುತಿಯಾಪರಂಬಿಲ್ ಚಾಲನೆ ನೀಡಿದರು.

ಪಂದ್ಯಾವಳಿಯ ತೀರ್ಪುಗಾರರಾಗಿ ದೊಡ್ಡಪ್ಪಾಜಿ ಮತ್ತು ಪೂರ್ಣಿಮಾ ಕಾರ್ಯನಿರ್ವಹಿಸಿದರು. ಪಂದ್ಯಾವಳಿಯಲ್ಲಿ ಶಾಲೆಯ ವಿದ್ಯಾರ್ಥಿಗಳು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



## ಮೌನದ ಒಡಲಲ್ಲಿ ಪ್ರೀತಿಯ ಕಡಲು: ಅಪ್ಪ ಎಂಬ ಅಲಿಖಿತ ಮಹಾಕಾವ್ಯ

ಸಾಧ್ಯವಿಲ್ಲ. ರಾತ್ರಿ ತಡವಾಗಿ ಮನೆಗೆ ಬಂದು, ಇಡೀ ಮನೆ ಮಲಗಿ ರುವಾಗ ಮಕ್ಕಳ ಕೋಣೆಗೆ ಹೋಗಿ, ಅವರ ತಲೆಯ ಮೇಲೆ ಮೃದುವಾಗಿ ಕೈಯಿಟ್ಟು ಸಾರುವ ಆ ಮೌನ ಪ್ರೀತಿಯಿದೆಯಲ್ಲ, ಅದಕ್ಕಿಂತ ದೊಡ್ಡ ಸುರಕ್ಷತೆಯ ಭಾವ ಈ ಜಗತ್ತಿನಲ್ಲಿ ಬೇರೊಂದಿಲ್ಲ.

ಬಾಲ್ಯದಲ್ಲಿ ಅಪ್ಪನ ಹೆಗಲ ಮೇಲೆ ಕೂತು ಜಾತ್ರೆ ನೋಡುವುದೇ ಒಂದು ಪರಮಾನಂದ. ಆ ಎತ್ತರದ ಹೆಗಲ ಮೇಲೆ ಕುಳಿತಾಗ ಇಡೀ ಜಗತ್ತೇ ನಮ್ಮ ಕೈಗೆ ಸಿಕ್ಕಷ್ಟು ಸಂಭ್ರಮವಾಗುತ್ತದೆ. ಅಂದು ನಮಗೆ ತಿಳಿಯುವುದಿಲ್ಲ, ನಾವು ಕುಳಿತಿರುವುದು ಕೇವಲ ಅಪ್ಪನ ಹೆಗಲ ಮೇಲಲ್ಲ, ಬದಲಿಗೆ ಇಡೀ ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುವ ಗಟ್ಟಿಯಾದ ಕಂಬದ ಮೇಲೆ ಎಂದು. ಮಗ ಅಥವಾ ಮಗಳು ತಪ್ಪು ಮಾಡಿದಾಗ ಸಿಟ್ಟಿನಿಂದ ಗದರಿಸುವ ಅಪ್ಪನೇ, ಆ ಮಗು ಸಮಾಜದಲ್ಲಿ ಒಂದು ಸಣ್ಣ ಸಾಧನೆ ಮಾಡಿದಾಗಲೂ ಒಳಗೊಳಗೇ ಹೆಮ್ಮೆಯಿಂದ ಬೀಗುತ್ತಾನೆ. ತನ್ನ ಗೆಳೆಯರ ಬಳಿ ಅಥವಾ ಕಚೇರಿಯ ಸಹೋದ್ಯೋಗಿಗಳ ಬಳಿ 'ಇದು ನನ್ನ ಮಗ', 'ಇದು ನನ್ನ ಮಗಳು' ಎಂದು ಹೇಳಿಕೊಳ್ಳುವಾಗ ಆ ತಂದೆಯ ಕಣ್ಣುಗಳಲ್ಲಿ ಮೂಡುವ ಮಿಂಚು ಮತ್ತು ಮುಖದಲ್ಲಿ ಅರಳುವ ನಗು ಇದೆಯಲ್ಲ, ಅದು ದೇವರಿಗೂ ಸಿಗದ ಪರಮ ತೃಪ್ತಿ. ಅಪ್ಪನಿಗೆ ತನ್ನ ಮಕ್ಕಳು ತನಗಿಂತ ದೊಡ್ಡ ಮಟ್ಟಕ್ಕೆ ಬೆಳೆಯಬೇಕು, ತನಗಿಂತ ಹೆಚ್ಚಿನ ಗೌರವವನ್ನು ಈ ಸಮಾಜದಲ್ಲಿ ಗಳಿಸಬೇಕು ಎಂಬ ಏಕೈಕ ಸ್ವಾರ್ಥವಿರುತ್ತದೆ. ತಂದೆಯನ್ನು ಮೀರಿಸಿದ ಮಗ ಬಂದಾಗ ಜಗತ್ತಿನ ಪ್ರತಿಯೊಬ್ಬ ಅಪ್ಪನೂ ಸೋಲನ್ನು ಸಂಭ್ರಮಿಸುತ್ತಾನೆ. ಆ ಸೋಲಿನಲ್ಲಿಯೇ ಅವರ ಬದುಕಿನ ಅತಿ ದೊಡ್ಡ ಗೆಲುವು ಅಡಗಿರುತ್ತದೆ.

ಬದುಕಿನ ಕಠಿಣ ಹಾದಿಯಲ್ಲಿ ನಮಗೆ ಅರಿವಿಲ್ಲದಂತೆ ನೈತಿಕತೆಯ ಪಾಠ ಕಲಿಸುವ ಮೊದಲ ಗುರು ಅಪ್ಪ. ಸೋತಾಗ ಕೈ ಹಿಡಿದು ನಡೆಸುವುದು, ಗೆದ್ದಾಗ ಅತಿಯಾಗಿ ಹಿಗ್ಗದೆ ನೆಲದ ಮೇಲೆ ಕಾಲೂರಿ ನಿಲ್ಲುವಂತೆ ಮಾಡುವುದು ಅಪ್ಪ ನೀಡುವ ಸಂಸ್ಕಾರ. ಅಪ್ಪ ಕೇವಲ ಒಂದು ಸಂಬಂಧವಲ್ಲ, ಅದು ಬದುಕಿನ ಪ್ರತಿ ಬಿರುಗಾಳಿಗೂ ಎದೆಯೊಡ್ಡಿ ನಿಲ್ಲುವ ಗಟ್ಟಿ ಗೋಡೆ. ಸಂಸಾರವೆಂಬ ನೌಕೆಯನ್ನು ಮುನ್ನಡೆಸಲು ಅಪ್ಪ ದಿನವಿಡೀ ಕಚೇರಿಯಲ್ಲೋ, ಕಾರ್ಖಾನೆಯಲ್ಲೋ ಅಥವಾ ಹೊಲ ಗದ್ದೆಗಳಲ್ಲೋ ಕಷ್ಟಪಡುತ್ತಿರುತ್ತಾನೆ. ಮುಖದ ಮೇಲಿನ ಸುಕ್ಕುಗಳು, ನಡುಗುವ ಕೈಗಳು ಮತ್ತು ಬಿಳಿಯಾಗುತ್ತಿರುವ ಕೂದಲುಗಳು ಅವರ ವಯಸ್ಸನ್ನು ಮಾತ್ರವಲ್ಲ, ಅವರು ನಮಗಾಗಿ ಸವೆಸಿದ ಬದುಕಿನ ದಿನಗಳನ್ನು ನೆನಪಿಸುತ್ತವೆ. ಎಷ್ಟೋ ಬಾರಿ ನಮಗೆ ಅಪ್ಪನ ಶಿಸ್ತು ಸಿಟ್ಟು ತರಿಸುತ್ತದೆ, ಅವರ ಮಾತುಗಳು ಕಹಿಯಾಗಿ ಕಾಣುತ್ತವೆ. ಆದರೆ ಆ ಕಹಿ ಮಾತಿನ ಹಿಂದಿರುವ ಕಾಳಜಿ ಮತ್ತು ಆತಂಕವನ್ನು ನಾವು ಅರಿಯುವಷ್ಟರಲ್ಲಿ ಕಾಲ ಎಷ್ಟೋ ಮುಂದೆ ಸರಿದಿರುತ್ತದೆ. ಅಪ್ಪ ಕಟ್ಟಿಕೊಟ್ಟ ಬದುಕಿನ ಬುನಾದಿಯ ಮೇಲೆಯೇ ನಾವು ನಮ್ಮ ಸುಂದರ ಭವಿಷ್ಯದ ಅರಮನೆಯನ್ನು ನಿರ್ಮಿಸಿರುತ್ತೇವೆ.

ಇಂದಿನ ಧಾವಂತದ ಬದುಕಿನಲ್ಲಿ ನಾವು ಎಷ್ಟೋ ಬಾರಿ ಅಪ್ಪನ ಮೌನವನ್ನು ನಿರ್ಲಕ್ಷಿಸುತ್ತೇವೆ. ವಯಸ್ಸಾದಂತೆ ಅವರು ಮೂಲೆಗುಂಪಾಗುತ್ತಾ ಹೋಗುತ್ತಾರೆ. ಆದರೆ ಅವರಿಗೆ ಬೇಕಿರುವುದು ದುಬಾರಿ ಉಡುಗೊರೆಗಳಲ್ಲ, ಬದಲಿಗೆ ದಿನದ ಕೊನೆಯಲ್ಲಿ ಅವರ ಪಕ್ಕ ಕುಳಿತು 'ಇವತ್ತು ಹೇಗಿದ್ದೀರಿ ಅಪ್ಪ?' ಎಂದು ಕೇಳುವ ಎರಡು ಪ್ರೀತಿಯ ಮಾತುಗಳು ಮಾತ್ರ. ಇಂದು ಅನೇಕರು ಅಪ್ಪನ ಬೆಚ್ಚಗಿನ ನೆರಳಿನಲ್ಲಿ ನಿರಾಳವಾಗಿ ಬದುಕುತ್ತಿದ್ದರೆ, ಇನ್ನು ಎಷ್ಟೋ ಜನ ಆ ಆಲದ ಮರದ ಆಸರೆಯನ್ನು ಕಳೆದುಕೊಂಡು ಕೇವಲ ನೆನಪುಗಳ ಕತ್ತಲಲ್ಲಿ, ಶೂನ್ಯತೆಯಲ್ಲಿ ಅಪ್ಪನನ್ನು ಹುಡುಕುತ್ತಿದ್ದಾರೆ. ಅಪ್ಪ ಇಲ್ಲದ ಮನೆ ಎಂದಿಗೂ ಪೂರ್ಣವೆನಿಸುವುದಿಲ್ಲ. ಅಲ್ಲಿ ಎಲ್ಲ ಸೌಕರ್ಯಗಳಿದ್ದರೂ ಒಂದು ರೀತಿಯ ಅಭದ್ರತೆ ಸದಾ ಕಾಡುತ್ತಿರುತ್ತದೆ. ಕಣ್ಣೆದುರಿಗೆ ಅಪ್ಪನಿಲ್ಲದ ಜಗತ್ತಿನಲ್ಲಿ ಬದುಕುತ್ತಿರುವವರಿಗೆ ಪ್ರತಿಯೊಂದು ಹಬ್ಬ, ಪ್ರತಿಯೊಂದು ಸಂತೋಷದ ಕ್ಷಣವೂ ಅವರ ಅನುಪಸ್ಥಿತಿಯನ್ನು ತೀವ್ರವಾಗಿ ನೆನಪಿಸಿ ಎದೆ ಕರಗಿಸುತ್ತದೆ. ಅಪ್ಪ ನಮ್ಮೊಂದಿಗಿರಲಿ ಅಥವಾ ಭೌತಿಕವಾಗಿ ದೂರವಾಗಿರಲಿ, ಅವರು ಕಲಿಸಿದ ಬದುಕಿನ ಸತ್ಯಗಳು, ಅವರು ತೋರಿದ ಸನ್ಮಾರ್ಗ ಸದಾ ನಮ್ಮನ್ನು ಮುನ್ನಡೆಸುವ ದಾರಿದೀಪವಾಗಿರುತ್ತವೆ.

ಒಮ್ಮೆ ಕಣ್ಣು ಮುಚ್ಚಿ ಆ ಮುಖವನ್ನು ನೆನಪಿಸಿಕೊಳ್ಳಿ. ಹಣೆಯ ಮೇಲಿನ ಸುಕ್ಕುಗಳು, ನಮಗಾಗಿ ದುಡಿದು ಕಲ್ಲಾಗಿರುವ ಆ ಕೈಗಳ ಸ್ಪರ್ಶ, ಬಿಳಿಯಾಗುತ್ತಿರುವ ತಲೆಕೂದಲು ಮತ್ತು ಆ ಗಂಭೀರ ಕಣ್ಣುಗಳ ಹಿಂದಿರುವ ಕರಗದ ವಾತ್ಸಲ್ಯ; ಹೌದು, ಅದುವೇ ನಮ್ಮ ಅಪ್ಪ. ನಾವೆಲ್ಲೋ ದೂರದ ಊರಿನಲ್ಲಿ ನೆಮ್ಮದಿಯಾಗಿ ನಿದ್ದೆ ಮಾಡುತ್ತಿದ್ದೇವೆ ಎಂದರೆ, ಅಲ್ಲಿ ನಮ್ಮ ಅಪ್ಪ ಇಂದಿಗೂ ನಮಗಾಗಿ ಜಾಗರಣೆ ಮಾಡುತ್ತಿದ್ದಾರೆ ಎಂದೇ ಅರ್ಥ. ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ, ಜಗತ್ತೇ ನಮ್ಮನ್ನು ಕೊಂಡಾಡಿದರೂ, ಆ ಮುಖದ ಮುಂದೆ ನಿಂತಾಗ ನಾವಿನ್ನೂ ಸಣ್ಣ ಮಗುವೇ. ಇಂದು ತಂದೆಯರ ದಿನದ ಈ ಭಾವುಕ ಕ್ಷಣದಲ್ಲಿ, ಅವರ ಮೌನದ ಹಿಂದಿನ ಆತಂಕವನ್ನು ಕಣ್ಣೀರಾಗಿ ಹರಿಯಲು ಬಿಡದೆ, ಆ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳೋಣ. ಅವರು ನಮ್ಮೊಂದಿಗಿರಲಿ ಅಥವಾ ಕೇವಲ ನೆನಪಾಗಿ ನಮ್ಮ ಎದೆಯಾಳದಲ್ಲಿರಲಿ, ಆ ಜನ್ಮದಾತನಿಗೆ ನಾವು ಕೊಡುವ ನಿಜವಾದ ಉಡುಗೊರೆ ಎಂದರೆ ಅವರು ಹೆಮ್ಮೆಪಡುವಂತೆ ಬದುಕುವುದು ಮಾತ್ರ. ಕಳೆದುಕೊಂಡ ಮೇಲೆ ಕಣ್ಣೀರ ಹನಿಯಲ್ಲಿ ಅವರ ಬಿಂಬವನ್ನು ಹುಡುಕುವ ಮುನ್ನ, ಕಣ್ಣೆದುರಿಗಿರುವಾಗಲೇ ಅವರ ಹೆಗಲ ಮೇಲೆ ಕೈಯಿಟ್ಟು "ನಾನಿದ್ದೇನೆ ಅಪ್ಪ" ಎಂದು ಹೇಳಿಬಿಡಿ; ಯಾಕೆಂದರೆ ಅಪ್ಪ ಎಂಬ ಆಲದ ಮರ ಕೇವಲ ಒಮ್ಮೆ ಮಾತ್ರ ಸಿಗುವ ದೈವಿಕ ಆಸರೆ.

# ವಿದ್ಯುತ್ ಖಾಸಗೀಕರಣ ನೀತಿ ಕೈಬಿಡಿ

## ಕೆಇಬಿ ನೌಕರರ ಬೃಹತ್ ಪ್ರತಿಭಟನೆ | ಸರ್ಕಾರದ ವಿರುದ್ಧ ನೌಕರರ ಸಂಘದ ಆಕ್ರೋಶ

ಚಾಮರಾಜನಗರ: ರೈತರು, ಗ್ರಾಹಕರು ಹಾಗೂ ಕೆಇಬಿ ನೌಕರರ ಹಿತದೃಷ್ಟಿಯಿಂದ ವಿದ್ಯುತ್ ಖಾಸಗೀಕರಣ ನೀತಿಯನ್ನು ತಕ್ಷಣವೇ ಕೈಬಿಡಬೇಕು ಎಂದು ಕೆಇಬಿ ನೌಕರರ ಸಂಘದ ಉಪಾಧ್ಯಕ್ಷ ಎನ್. ಮಹೇಶ್ ತೀವ್ರವಾಗಿ ಆಗ್ರಹಿಸಿದ್ದಾರೆ.

ನಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಚೆಸ್ಕಾಂ) ಕಚೇರಿ ಆವರಣದಲ್ಲಿ ಫೆಡರೇಷನ್ ಆಫ್ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಮುಂಬೈ ಮೂಲದ ಟಾಟಾ ಪವರ್ ಕಂಪನಿಯು ಕರ್ನಾಟಕದಲ್ಲಿ ವಿದ್ಯುತ್ ವಿತರಣೆ ನಿರ್ವಹಣೆ ಮಾಡಲು ಕೆ.ಇ.ಆರ್.ಸಿ ಗೆ ಸಲ್ಲಿಸಿರುವ ಅರ್ಜಿಯನ್ನು ವಿರೋಧಿಸಿ ಈ ಶನಿವಾರದ ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು.

### ಟೆಲಿಕಾಂ ಕ್ಷೇತ್ರದ ದುಸ್ಥಿತಿಯ ಎಚ್ಚರಿಕೆ

ಕಳೆದ ನಾಲ್ಕು ವರ್ಷಗಳಲ್ಲಿ ವಿದ್ಯುತ್ ಖಾಸಗೀಕರಣವನ್ನು ವಿರೋಧಿಸಿ ಕೆಇಬಿ ನೌಕರರ ಸಂಘದ ವತಿಯಿಂದ ಈಗಾಗಲೇ 3–4 ಬಾರಿ ಪ್ರತಿಭಟನೆ ನಡೆಸಲಾಗಿದ್ದರೂ, ಪ್ರಸ್ತುತ ವಿದ್ಯುತ್ ಕ್ಷೇತ್ರಕ್ಕೆ ಖಾಸಗೀಕರಣದ ಭೀತಿ ಎದುರಾಗಿದೆ. ಟಾಟಾ ಪವರ್ ಕಂಪನಿಯು ರಾಜ್ಯದಲ್ಲಿ ವಿದ್ಯುತ್ ಪೂರೈಕೆ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಿರುವುದು ಇದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಖಾಸಗೀಕರಣದಿಂದಾಗಿ ಟೆಲಿಕಾಂ ಕ್ಷೇತ್ರವು ಇಂದು ಸಂಪೂರ್ಣವಾಗಿ ಯಾವ ಮಟ್ಟಕ್ಕೆ ತಲುಪಿದೆ ಮತ್ತು ಬಿಎಸ್ಎನ್ಎಲ್ ಸಂಸ್ಥೆಗೆ ಎಂತಹ ಪರಿಸ್ಥಿತಿ ಬಂದೊದಗಿದೆ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ ಎಂದು ಅವರು ಎಚ್ಚರಿಸಿದರು. ಈ ಮಹತ್ವದ ಪ್ರತಿಭಟನಾ ಸಭೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ ಪ್ರದೀಪ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಮಹೇಶ್, ಧೃಪದ್, ಪ್ರಶಾಂತ್, ಸಿದ್ದರಾಜು ಹಾಗೂ ಮಂಜುನಾಥ್ ಉಪಸ್ಥಿತರಿದ್ದರು. ಇವರೊಂದಿಗೆ ಸಂಘದ ಪ್ರಮುಖರಾದ ಮುರುಳಿಕೃಷ್ಣ, ಪ್ರಶಾಂತ್, ಸೋಮೇಶ್, ಶರಣ ಬಸಪ್ಪ, ಮಹದೇವಸ್ವಾಮಿ, ಚನ್ನಂಜಕುಮಾರ್, ಮರಿಸ್ವಾಮಿ, ಸತೀಶ್, ಮಂಜುನಾಥ್ ಸೇರಿದಂತೆ ನೌಕರರು ಭಾಗವಹಿಸಿದರು.



### ಶತಮಾನದ ಇತಿಹಾಸವಿರುವ ಸಂಸ್ಥೆಯ ಮಾರಾಟಕ್ಕೆ ವಿರೋಧ

ಸರ್ಕಾರವೇ ಹುಟ್ಟುಹಾಕಿರುವ ಸಾರ್ವಜನಿಕ ಸ್ವಾಮ್ಯದ ಕಂಪನಿಗಳನ್ನು, ಅದೇ ಸರ್ಕಾರವೇ ಹಿಸುಕಿ ಸಾಯಿಸುವ ಪ್ರಕ್ರಿಯೆಗೆ ಖಾಸಗೀಕರಣ ಎನ್ನಬಹುದು. ನೂರು ವರ್ಷಗಳ ಸುದೀರ್ಘ ಇತಿಹಾಸವಿರುವ ವಿದ್ಯುತ್ ಕ್ಷೇತ್ರದಲ್ಲಿ, ಸಾವಿರಾರು ನೌಕರರು ತಮ್ಮ ಜೀವವನ್ನು ಮುಡಿಪಾಗಿಟ್ಟು ಇಲಾಖೆಯನ್ನು ಕಟ್ಟಿ ಬೆಳೆಸಿದ್ದಾರೆ. ಆಧುನಿಕ ತಂತ್ರಜ್ಞಾನವಿಲ್ಲದ ಹಿಂದಿನ ದಿನಗಳಲ್ಲಿ ನೌಕರರು ತೀವ್ರ ಶ್ರಮವಹಿಸಿ ಕಾಡಂಚಿನ ಹಳ್ಳಿಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಆಸ್ತಿ ಹೊಂದಿರುವ ಹೆಮ್ಮೆಯ ಸರ್ಕಾರಿ ಸಂಸ್ಥೆಯನ್ನು ಖಾಸಗಿಯವರಿಗೆ ಹಸ್ತಾಂತರಿಸಲು ಹೊರಟಿರುವುದು ಎಷ್ಟು ಸರಿ ಎಂದು ಮಹೇಶ್ ಪ್ರಶ್ನಿಸಿದರು.

### ರೈತರ ಉಚಿತ ವಿದ್ಯುತ್‌ಗೆ ಕುತ್ತು ತರಲಿರುವ ನೀತಿ

ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರ ಖಾಸಗೀಕರಣವಾದರೆ ನೌಕರರಿಗಿಂತಲೂ ಹೆಚ್ಚಾಗಿ ಅನ್ನದಾತ ರೈತರಿಗೆ ದೊಡ್ಡ ಹೊಡೆತ ಬೀಳಲಿದೆ. ಪ್ರಸ್ತುತ ರೈತರ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಸೌಲಭ್ಯಕ್ಕೆ ಇದರಿಂದ ಕುತ್ತು ಬರಲಿದೆ. ಮುಂಬರುವ ದಿನಗಳಲ್ಲಿ ಖಾಸಗಿ ಕಂಪನಿಗಳು ರೈತರ ಪಂಪ್‌ಸೆಟ್‌ಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸುವ ಮೂಲಕ ತಿಂಗಳಿಗೆ 15 ರಿಂದ 20 ಸಾವಿರ ರೂಪಾಯಿಗಳವರೆಗೆ ಹಣ ವಸೂಲಿ ಮಾಡುವ ಸಾಧ್ಯತೆಯಿದೆ. ಪ್ರತಿ ತಿಂಗಳು ಇಷ್ಟೊಂದು ಭಾರಿ ಮೊತ್ತದ ಹಣವನ್ನು ಪಾವತಿಸಿ ರೈತರು ಕೃಷಿ ಮಾಡಲು ಹೇಗೆ ಸಾಧ್ಯ ಎಂದು ಅವರು ತೀವ್ರ ಆತಂಕ ವ್ಯಕ್ತಪಡಿಸಿದರು.

## ಜೆಕೆ ಟೈರ್‌ನಿಂದ ಸ್ವಯಂಪ್ರೇರಿತ ರಕ್ತದಾನ ಅಭಿಯಾನ




ಮೈಸೂರು: ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ತನ್ನ ಮಾಜಿ ಅಧ್ಯಕ್ಷ ದಿವಂಗತ ಹರಿ ಶಂಕರ್ ಸಿಂಘಾನಿಯಾ 93ನೇ ಜನ್ಮದಿನೋತ್ಸವದ ಅಂಗವಾಗಿ ಲಯನ್ಸ್ ರಕ್ತನಿಧಿ ಕೇಂದ್ರ (ಜೀವಧಾರ) ಮತ್ತು ಭಾರತೀಯ ಉದ್ಯಮ ಒಕ್ಕೂಟ ಸಹಯೋಗದೊಂದಿಗೆ ಬೃಹತ್ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಿತ್ತು.

ಮೈಸೂರಿನಲ್ಲಿರುವ ಜೆಕೆ ಟೈರ್‌ನ ಮೂರು ಉತ್ಪಾದನಾ ಘಟಕಗಳು ಮತ್ತು ಕಂಪನಿಯ ಅತಿಥಿಗೃಹ ಸೇರಿ ಒಟ್ಟು ನಾಲ್ಕು ಸ್ಥಳಗಳಲ್ಲಿ ಈ ಶಿಬಿರವು ಏಕಕಾಲದಲ್ಲಿ ಜರುಗಿತು. ಮೈಸೂರು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಕುಮಾರಸ್ವಾಮಿ ಬೃಹತ್ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಕಂಪನಿಯ ಸಾಮಾಜಿಕ ಬದ್ಧತೆಯನ್ನು ಶ್ಲಾಘಿಸಿದರು. ಜೆಕೆ ಟೈರ್ ಉದ್ಯೋಗಿಗಳು ರಕ್ತದಾನ ಮಾಡುವಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ವರ್ಷಗಳಿಂದ ಅವರ ನಿರಂತರ ಪಾಲ್ಗೊಳ್ಳುವಿಕೆಯು ತುರ್ತು ಪರಿಸ್ಥಿತಿಯಲ್ಲಿರುವ ರೋಗಿಗಳಿಗೆ ಜೀವನಾಡಿಯಾಗಿದೆ. ಜೆಕೆ ಟೈರ್ ಮೈಸೂರಿನಲ್ಲಿ ಒಂದು ಮಾದರಿ ಸಂಸ್ಥೆಯಾಗಿ ಹೊರಹೊಮ್ಮಿದ್ದು, ಜಿಲ್ಲೆಯ ಇತರ ಕಂಪನಿಗಳಿಗೂ ಇಂತಹ ಜನಪರ ಆರೋಗ್ಯ ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಜೆಕೆ ಟೈರ್‌ನ ಉಪಾಧ್ಯಕ್ಷ ವಿ.ಈಶ್ವರ ರಾವ್ ಉದ್ಘಾಟನೆ ಬೆನ್ನಲ್ಲೇ ಸ್ವತಃ ರಕ್ತದಾನ ಮಾಡಿದರು. ಸಂಸ್ಥೆಯ ಆರೋಗ್ಯ ಜಾಗೃತಿ ಬದ್ಧತೆಯನ್ನು ಒತ್ತಿಹೇಳಿದರು. ಕಳೆದ ವರ್ಷ 1,358 ಯೂನಿಟ್ ರಕ್ತ ಸಂಗ್ರಹಿಸಲಾಗಿತ್ತು, ಈ ವರ್ಷದ ಶಿಬಿರದಲ್ಲಿಯೂ ಉದ್ಯೋಗಿಗಳು 1,300 ಕ್ಕೂ ಹೆಚ್ಚು ಯೂನಿಟ್ ರಕ್ತವನ್ನು ಅತ್ಯುತ್ಸಾಹದಿಂದ ದಾನ ಮಾಡಲಿದ್ದಾರೆ. 12 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಒಂದು ಉದಾತ್ತ ಕಾರ್ಯವಾಗಿದೆ. ಜೀವಧಾರ ಸಂಸ್ಥೆಯೊಂದಿಗಿನ ನಮ್ಮ ಸಹಭಾಗಿತ್ವವು ಯಾವುದೇ ರಕ್ತದ ಗುಂಪಿನ ಅಗತ್ಯವಿದ್ದರೂ, ನಮ್ಮ ಉದ್ಯೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ತುರ್ತು ಸಂದರ್ಭಗಳಲ್ಲಿ ತಕ್ಷಣದ ಜೀವ ರಕ್ಷಕ ನೆರವನ್ನು ಖಾತ್ರಿಪಡಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಿಐಐ ಮೈಸೂರು ವಲಯದ ಅಧ್ಯಕ್ಷ ಉತ್ಸವ್ ಅಗರ್ವಾಲ್ ಮಾತನಾಡಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ (ಮೈಸೂರು) ಕಾರ್ಯದರ್ಶಿ ಡಾ.ಜಯಂತ್, ಲಯನ್ಸ್ ರಕ್ತನಿಧಿ ಕೇಂದ್ರ – ಜೀವಧಾರದ ವ್ಯವಸ್ಥಾಪಕ ನಿರ್ದೇಶಕ ಎಸ್.ಇ. ಗಿರೀಶ್, ಜೆಕೆ ಟೈರ್‌ನ ಹಿರಿಯ ಆಡಳಿತವರ್ಗದ ಅಧಿಕಾರಿಗಳಾದ ಜಗದೀಶ್, ರಾಜೀವ್‌ಕುಮಾರ್, ದೊನಾಲ್ಡ್‌ವಾಜ್, ನವೀನ್, ಎಸ್‌ಕೆ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

## ರೈತರು ಬೆಳೆವಿಮೆ ಕಟ್ಟಲು ಜೂ.30ರ ವರೆಗೆ ಅವಕಾಶ

ಗುಂಡ್ಲುಪೇಟೆ: 2026–27ನೇ ಮುಂಗಾರು ಹಂಗಾಮಿನ ಬೆಳೆಗಳಿಗೆ ಬೆಳೆ ವಿಮೆ ನೋಂದಾವಣೆ ಪ್ರಾರಂಭವಾಗಿದ್ದು, ರೈತರು ಜೂನ್ 30 ರ ಒಳಗೆ ಕಂತನ್ನು ಕಟ್ಟಿ ಬೆಳೆ ವಿಮೆ ನೊಂದಾವಣೆ ಮಾಡಿಕೊಳ್ಳಬಹುದಾಗಿರುತ್ತದೆ. ಅಲ್ಲದೆ ಕೆಲವು ಬೆಳೆಗಳಿಗೆ 15–07–2026 ರ ವರೆಗೂ ಕಾಲಾವಕಾಶವಿದೆ.

ಬೆಳೆ ವಿಮೆ ಕಂತು ಕಟ್ಟುವ ಆಸಕ್ತಿ ಇರುವವರು ಸಮೀಪದ ರೈತ ಸಂಪರ್ಕ ಕೇಂದ್ರ ಇಲ್ಲಾ ಕೃಷಿ ಇಲಾಖೆಗೆ ಭೇಟಿ ನೀಡಿ ಯಾವ ಬೆಳೆಗೆ ಎಷ್ಟು ವಿಮಾ ಮೊತ್ತ ವಿದೆ ಎಂಬುದನ್ನು ತಿಳಿದುಕೊಳ್ಳಬಹುದು ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್ ತಿಳಿಸಿದರು.

ವರ್ತಮಾನ

### ಹೊಂಗನೂರಿನಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ

## ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ



ಚಾಮರಾಜನಗರ, ತಾಲೂಕಿನ ಹೊಂಗನೂರು ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ಇಂದು ನೀಡಿ, ಪರಿಶೀಲನೆ ಮಾಡಿ, ಗ್ರಾಮಸ್ಥರು ತಾಳ್ಮೆಯಿಂದ ಇರುವಂತೆ ಮನವಿ ಮಾಡಿದರು.

ಸ್ಥಳಕ್ಕೆ ತೆರಳಿದ ಎ.ಆರ್. ಕೃಷ್ಣಮೂರ್ತಿ ಅವರು ಘಟನೆ ಕುರಿತು ಗ್ರಾಮಸ್ಥರಿಂದ ಮಾಹಿತಿ ಪಡೆದು ಕೊಂಡರು. ಬಳಿಕ ಮಾತನಾಡಿದ ಅವರು, ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡುವಂತಹ ಘಟನೆಗಳು ಪದೇ ಪದೇ ನಡೆಯುತ್ತಿರುವುದು ತೀವ್ರ ಖಂಡನೀಯ. ಇಂತಹ ಘಟನೆಗಳು ಮರುಕಳಿಸದಂತೆ ಕ್ಯಾಮರಾ ಹಾಗೂ ಟವರ್ ಲೊಕೇಷನ್ ಪರಿಮಿತಿಗಳನ್ನು ಪರಿಶೀಲಿಸಿ, ಪೊಲೀಸ್ ಅಧಿಕಾರಿಗಳು ತುರ್ತು ಕ್ರಮ ವಹಿಸಬೇಕು ಎಂದು ತಿಳಿಸಿದರು. ಘಟನೆ ಕುರಿತು ಪೊಲೀಸರು ಸೂಕ್ತ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು. ಈ ಸಂಬಂಧ ಸೂಕ್ತವಾದ ಕಾನೂನನ್ನು ಜಾರಿಯಾಗಬೇಕಾಗಿದೆ. ವಿಧಾನಸಭೆ ಅಧಿವೇಶನದಲ್ಲಿ ರಾಷ್ಟ್ರ ನಾಯಕರಿಗೆ ಆಗುತ್ತಿರುವ ಇಂಥ ಅಪಮಾನಗಳ ಬಗ್ಗೆ ಮಾತನಾಡುತ್ತೇನೆ. ಗೃಹ ಸಚಿವರಾಗಿರುವ ಪ್ರಿಯಾಂಗ್ ಖರ್ಗೆ ಅವರೊಂದಿಗೆ ಚರ್ಚೆ ಮಾಡಿ, ಕಾನೂನು ಜಾರಿ ಮಾಡುವಂತೆ ಮನವಿ ಮಾಡಿಕೊಳ್ಳುವುದಾಗಿ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅಪಮಾನ ಮಾಡುವ ಮೂಲಕ ಗ್ರಾಮದಲ್ಲಿ ಸಾಮರಸ್ಯ ಜೀವನ ಮತ್ತು ನೆಮ್ಮದಿಗೆ ಭಂಗ ತರುವ ಉದ್ದೇಶವನ್ನು ದುಷ್ಕರ್ಮಿಗಳು ಮಾಡುತ್ತಿದ್ದಾರೆ. ಸಮುದಾಯಗಳ ನಡುವೆ ಬೆಂಕಿ ಹಚ್ಚುವ ಕೆಲಸ ಇದಾಗಿದೆ. ಯಾರು ಸಹ ಸಹನೆಯನ್ನು ಕಳೆದುಕೊಳ್ಳಬಾರದು, ಇಂಥ ಕೃತ್ಯದಲ್ಲಿ ಭಾಗಿಯಾದವರನ್ನು ಪೊಲೀಸರು ಪತ್ತೆ ಮಾಡಿ ಕಾನೂನಿನ ಅಡಿಯಲ್ಲಿ ಶಿಕ್ಷೆ ಕೊಡಿಸಲಿದ್ದಾರೆ. ಶಾಂತಿಯನ್ನು ಕಾಪಾಡುವಂತೆ ಗ್ರಾಮಸ್ಥರಲ್ಲಿ ಕೃಷ್ಣಮೂರ್ತಿ ಮತ್ತೊಮ್ಮೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಹೊಂಗನೂರು ಗ್ರಾಮದ ಯಜಮಾನರು, ಮುಖಂಡರು, ಗ್ರಾ.ಪಂ. ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಯುವಕರ ಸಂಘದ ಪದಾಧಿಕಾರಿಗಳು ಇದ್ದರು.

## ಸಿಬಿಲ್ ಸ್ಕೋರ್ ಕಡ್ಡಾಯ: ಕ್ರಮ ಖಂಡನೆ

ಗುಂಡ್ಲುಪೇಟೆ: ಚಿನ್ನದ ಮೇಲೆ ಸಾಲ ನೀಡಲು ಸಿಬಿಲ್ ಸ್ಕೋರ್ ಕಡ್ಡಾಯ ಎಂದು ಗುಂಡ್ಲುಪೇಟೆ ಶಾಖೆ ಕೆನರಾ ಬ್ಯಾಂಕ್ ಮ್ಯಾನೇಜರ್ ಲೋನ್ ಅರ್ಜಿ ತಿರಸ್ಕರಿಸಿದ ಕ್ರಮವನ್ನು ರೈತ ಚೌಡಹಳ್ಳಿ ಕಾಂತರಾಜು ಖಂಡಿಸಿದರು.

ಪಟ್ಟಣದ ಕೆನರಾ ಬ್ಯಾಂಕ್ ಶಾಖೆ ಮುಂದೆ ಆಕ್ರೋಶ ಹೊರಹಾಕಿದ ಕಾಂತರಾಜು, ಚಿನ್ನ ಅಡಮಾನ ವಿಡಲು ಕೆನರಾ ಬ್ಯಾಂಕ್ ಗೆ ಅರ್ಜಿ ಸಲ್ಲಿಸಲಾಗಿತ್ತು. ಸಿಬಿಲ್ ಸ್ಕೋರ್ ನೆಪವೊಡ್ಡಿ ಬ್ಯಾಂಕ್ ಮ್ಯಾನೇಜರ್ ಅರ್ಜಿ ತಿರಸ್ಕಾರ ಮಾಡಿದ್ದಾರೆ. ಇದಕ್ಕೆ ಕಾರಣ ಕೇಳಿದ ರೈತನಿಗೆ ಮ್ಯಾನೇಜರ್ ನಿಮ್ಮ ಸಿಬಿಲ್ ಸ್ಕೋರ್ ಸರಿಯಿಲ್ಲ ಎಂದು ಅರ್ಜಿ ತಿರಸ್ಕರಿಸಲಾಗಿದೆ ಎಂದು ಸಬೂಬು ಹೇಳಿದ್ದಾರೆ. ಆದರೆ ಆರ್.ಬಿ.ಐ ನಿಯಮದ ಪ್ರಕಾರವಾಗಿ ಯಾವುದೇ ರೈತ ಎರಡು ಲಕ್ಷದವರೆಗೆ ಸಾಲ ಪಡೆಯಲು ಯಾವುದೇ ರೀತಿಯ ಸಿಬಿಲ್ ಅವಶ್ಯವಿಲ್ಲ ಎಂದು ತಿಳಿಸಿದ್ದು, ಇವರು ನನಗೆ ಸಾಲ ನೀಡದೆ ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಕೆನರಾ ಬ್ಯಾಂಕ್ ನವರು ಆರ್.ಬಿ.ಐ ರೂಲ್ಸ್ ಬ್ರೇಕ್ ಮಾಡುತ್ತಿದ್ದು, ಸಿಬಿಲ್ ಸ್ಕೋರ್ ನೆಪವೊಡ್ಡಿ ನೈಜ ಫಲಾನುಭವಿಗಳಿಗೆ ಸಾಲ ದೊರಕದಂತೆ ಕಠಿಣ ನಿಯಮಗಳನ್ನು ಜಾರಿಗೆ ತರುತ್ತಿದ್ದಾರೆ. ಇದರಿಂದ ಸಾರ್ವಜನಿಕರು ಹಾಗೂ ರೈತರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಹಾಗೂ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿಯಮ ಸಡಿಲಿಕೆ ಮಾಡಬೇಕು. ಇಲ್ಲದಿದ್ದರೆ ಬ್ಯಾಂಕ್ ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಇದೇ ಸಂದರ್ಭದಲ್ಲಿ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿಂದ ನಾಯಕ, ಗಿರೀಶ್, ರೈತ ಮುಖಂಡ ಪ್ರಭುಸ್ವಾಮಿ ಇದ್ದರು.



## ಪರೀಕ್ಷೆಗೆ ಕನ್ನಡ ಕಡಗಣನೆಗೆ ಖಂಡನೆ

ಮೈಸೂರು: ರೈಲ್ವೆ ಇಲಾಖೆಯಿಂದ ಜೂ.25 ರಂದು ನಡೆಸುತ್ತಿರುವ ಪರೀಕ್ಷೆ ವೇಳೆ ಕನ್ನಡ ಕಡೆಗಣನೆ ಮಾಡಲಿರುವದು ಖಂಡನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜೂ. 25 ರ ಗೂಡ್ಸ್ ಟ್ರೇನ್ ಮ್ಯಾನೇಜರ್ ಪದೋನ್ನತಿ ಪರೀಕ್ಷೆ ಕೂಡಲೇ ಮುಂದೂಡಬೇಕು, ಪರೀಕ್ಷೆಯಲ್ಲಿ ಕನ್ನಡ ಭಾಷೆ ಸೇರಿಸಿ ಹೊಸ ವೇಳಾ ಪಟ್ಟಿ ಪ್ರಕಟಿಸಬೇಕು, ಕರ್ನಾಟಕದಲ್ಲಿ ನಡೆಯುವ ಎಲ್ಲಾ ರೈಲ್ವೆ ನೇಮಕಾತಿ ಮತ್ತು ಪದೋನ್ನತಿ ಪರಿಕ್ಷೆಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬೇಕು, ಕನ್ನಡಿಗರ ಭಾಷಾ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು, ರೈಲ್ವೆಯ ಎಲ್ಲ ಹಂತಗಳಲ್ಲಿ ಕನ್ನಡಕ್ಕೆ ಸಂವಿಧಾನಾತ್ಮಕ ಮಾನ್ಯತೆಗೆ ತಕ್ಕ ಸ್ಥಾನ ಕಲ್ಪಿಸಬೇಕು. ಈ ಬೇಡಿಕೆ ಈಡೇರದಿದ್ದರೆ ತೀವ್ರ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು. ವೇಣು, ಮಂಜೇಶ್, ಕೆ.ಪಿ. ರಾಜು, ಜಿ. ಲೋಕೇಶ್‌ಕುಮಾರ್, ಹೇಮಂತ್‌ಗೌಡ ಇದ್ದರು.




## ನಾಳೆ ನಾನಾ ಸಾಧಕರಿಗೆ ಸನ್ಮಾನ



ಮೈಸೂರು: ಪಾತಿ ಫೌಂಡೇಷನ್ ವತಿಯಿಂದ ಜೂ. 22 ರ ಸಂಜೆ 5ಕ್ಕೆ ನಗರದ ಜೆಎಲ್‌ಬಿ ರಸ್ತೆ ನಾದಬ್ರಹ್ಮ ಸಭಾಂಗಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವ ಅಂಗವಾಗಿ ರಸಮಂಜರಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಮುಖ್ಯಸ್ಥರಾದ ಪಾರ್ಥಸಾರಥಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದೇ ವೇಳೆ ವಿಷ್ಣು ಗ್ರೂಪ್ ಚಂದನ ಶ್ರೀನಿವಾಸ ರಸಮಂಜರಿ ನಡೆಸಿಕೊಡಲಿದ್ದಾರೆ. ಸಂಸದ ಯದುವೀರ್, ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಶರತ್‌ಚಂದ್ರ, ಜಿ. ವೆಂಕಟರಾಮ್, ಮಡ್ಡಿಕೆರೆ ಗೋಪಾಲ್, ರಘುರಾಂ ವಾಜಪೇಯಿ, ಸಿ. ನಾರಾಯಣಗೌಡ ಇನ್ನಿತರರು ಉಪಸ್ಥಿತರಿರುವರು. ಇದು ಸಂಪೂರ್ಣ ಉಚಿತ ಪ್ರವೇಶದ ಕಾರ್ಯಕ್ರಮವಾಗಿದೆ ಎಂದರು. ಕೃಷ್ಣಮೂರ್ತಿ, ಮಹದೇವಪ್ಪ, ಜಯಪ್ಪ, ಚಂದನ್ ಶ್ರೀನಿವಾಸ್, ಗೋಲ್ಡನ್ ಸುರೇಶ್, ಬಸವರಾಜು, ಕುಮಾರ್ ಆರಾಧ್ಯ ಇದ್ದರು.

## ಮುಸ್ಲಿಂ ಸಮುದಾಯದ ಪ್ರತಿಭಟನೆ

ಕೊಳ್ಳೇಗಾಲ: ಮಸಣಾಪುರ ಹಾಗೂ ಹೊಂಗನೂರು ಗ್ರಾಮಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ನಾಮಫಲಕಕ್ಕೆ ಅವಮಾನ ಎಸಗಿರುವ ಘಟನೆ ಖಂಡಿಸಿ ಕೊಳ್ಳೇಗಾಲದಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿದ ಪ್ರತಿಭಟನಾಕಾರರು ಬಳಿಕ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಇಂತಹ ಕೃತ್ಯಗಳನ್ನು ಸಹಿಸಲಾಗದು ಎಂದು ಪ್ರತಿಭಟನಾಕಾರರು ಅಭಿಪ್ರಾಯಪಟ್ಟರು. ಪ್ರತಿಭಟನೆಯಲ್ಲಿ ನಗರಸಭೆಯ ಮಾಜಿ ಉಪಾಧ್ಯಕ್ಷ ಅಕ್ಮಲ್ ಪಾಷ, ಮುಖಂಡರಾದ ಮಹಮ್ಮದ್ ಮತೀನ್, ಎಸ್‌ಡಿಪಿಐ ಅಧ್ಯಕ್ಷ ಇಮ್ರಾನ್ ಟಿಪ್ಪು, ಜಕಾವುಲ್ಲಾ, ನದೀಮ್, ಅಬ್ದುಲ್ ವಾಹೀದ್, ರಿಜ್ವಾನ್ ಪಾಷ, ಯಾಹಿಯಾ, ಇಮ್ತಾನ್ ಪಾಷ, ಸೈಯದ್ ಎಜಾಜ್, ವಸೀಮ್ ಸೇರಿದಂತೆ ಹಲವರು ಭಾಗವಹಿಸಿದ್ದರು.




### ಚನ್ನಬಸವಸ್ವಾಮೀಜಿ ಹೇಳಿಕೆ | ಶರಣ ಸಾಹಿತ್ಯ ಪರಿಷತ್‌ನಿಂದ ದತ್ತಿ ಕಾರ್ಯಕ್ರಮ

## ಸಮ ಸಮಾಜ ನಿರ್ಮಾಣದಲ್ಲಿ ಶರಣರ ಕೊಡುಗೆ ಅಪಾರ

ಚಾಮರಾಜಗರ: ಜಾತಿ ಹಾಗೂ ವರ್ಗ ರಹಿತ ಸಮಾಜ ನಿರ್ಮಾಣ ಮಾಡಲು ಶರಣರು ಹಾಕಿಕೊಟ್ಟ ದಾರಿ ಮತ್ತು ಅವರ ವಚನಗಳು ಮಹತ್ವವನ್ನು ಪಡೆದುಕೊಂಡಿದೆ ಎಂದು ನಗರ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ತಿಳಿಸಿದರು.

ನಗರದ ಮಹಾಮನೆಯಲ್ಲಿ ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆಯಿಂದ ಬಸವೇಶ್ವರರು ಹಾಗೂ ಅಕ್ಕಮಹದೇವಿ ಜಯಂತಿ ಮತ್ತು ಲಿ. ಗೌರಮ್ಮ ಚನ್ನಬಸಪ್ಪ ಹಾಗೂ ವೈ.ಎಂ.ಪುಟ್ಟಮಲ್ಲಪ್ಪ ಸ್ಮರಣಾರ್ಥ ದತ್ತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. 12ನೇ ಶತಮಾನದಲ್ಲಿ ಬಸವಾದಿ ಶರಣರು ಭಿತ್ತಿದ ಬೀಜ ಇಂದು ಹೆಮ್ಮಾರವಾಗಿ ಬೆಳೆದು ಎಲ್ಲರಿಗೂ ಫಲ ನೀಡುತ್ತಿದೆ. ಬಸವಣ್ಣ ಮತ್ತು ಅಕ್ಕಮಹದೇವಿ ಅವರ ವಿಚಾರಧಾರೆಗಳು ಇಂದಿಗೂ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಕಾಯಕ ತತ್ವವನ್ನು ಜಗತ್ತಿಗೆ ಸಾರಿದರು. ಗಂಡು ಹೆಣ್ಣು ಎಂಬ ಭೇದಭಾವ ಇಲ್ಲ ಎಂದು ಹೇಳುವ ಮೂಲಕ ಮಹಿಳೆಗೆ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು. ಅಕ್ಕನಿಗೆ ಬೇಡದ ಜನಿವಾರ ನನಗೂ ಬೇಡ ಎಂದು ತ್ಯಜಿಸಿ, ಸ್ವಾತಂತ್ರ್ಯ ಲಿಂಗಾಯತ ಧರ್ಮವನ್ನು ಸ್ಥಾಪನೆ ಮಾಡಿದರು. ಅವರ ಅಕ್ಕಮಹದೇವಿ ಸಹ ವೈರಾಗ್ಯ ಮೂರ್ತಿಯಾಗಿ ನಮ್ಮೆಲ್ಲರಿಗೂ ಅದರ್ಶವಾಗಿದಾರೆ. ಅವರ ತತ್ವ ಅದರ್ಶಗಳನ್ನು ಎಲ್ಲರು ಮೈಗೂಡಿಸಿಕೊಳ್ಳಬೇಕು ಎಂದರು.




ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಸವಣ್ಣ ಮತ್ತು ಅಕ್ಕಮಹದೇವಿ ಅವರ ವಚನಗಳು ಇಂದಿಗೂ ಹೆಚ್ಚು ಪ್ರಚಲಿತವನ್ನು ಪಡೆದುಕೊಂಡಿವೆ. ಅವರು ನುಡಿದಂತೆ ನಡೆದವರು. ಜಾತಿ ವ್ಯವಸ್ಥೆ, ಸ್ತ್ರೀಯರ ಶೋಷನೆ ಇದ್ದ ಆ ಕಾಲಘಟ್ಟದಲ್ಲಿಯೇ ವಿರೋಧಿಸಿ, ಹೋರಾಟ ಮಾಡಿದವರು. ವಚನಗಳ ಕಾಲ ಮೂಲಕ ಜನರಲ್ಲಿ ಕ್ರಾಂತಿಯನ್ನು ಮಾಡಿದರು ಎಂದು ಬಣ ?ಣಸಿದರು.

ಯಾನಗಹಳ್ಳೀ ಚನ್ನಬಸಪ್ಪ ಹಾಗೂ ಯಣಗುಂಬ ಪುಟ್ಟಮಲ್ಲಪ್ಪ ಅವರ ಹೆಸರಿನಲ್ಲಿ ದತ್ತಿ ಕಾರ್ಯಕ್ರಮ ಹೆಚ್ಚು ಪ್ರಮುಖ್ಯತೆಯನ್ನು ಪಡೆದುಕೊಂಡಿದೆ. ಇಬ್ಬರು ಹಿರಿಯರು ಸಹ ಸಮಾಜಕ್ಕೆ ತಮ್ಮನ್ನು ಅರ್ಪಣೆ ಮಾಡಿಕೊಂಡಿದ್ದವರು. ಸದಾ ಇತರರ ಚಿಂತನೆ ಮಾಡುವ ಜೊತೆಗೆ ಅವರ ಶ್ರೇಯೋಭಿವೃದ್ಧಿ ಶ್ರಮಿಸುತ್ತಿದ್ದರು. ಗ್ರಾಮವನ್ನು ಸಮರ್ಥವಾಗಿ ಮುನ್ನಡೆಸುವ ಜೊತೆಗೆ ನೊಂದವರು ಹಾಗೂ ನಿರ್ಗತಿಕರಿಗೆ ಸಹಾಯ ಮಾಡುವ ಮನೋಭಾವನೆಯನ್ನು ಹೊಂದಿದ್ದರು ಎಂದು ಸ್ಮರಿಸಿಕೊಂಡರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿ, ಪೂಜ್ಯ ರಾಜೇಂದ್ರಶ್ರೀಗಳು ಸ್ಥಾಪನೆ ಮಾಡಿದ ಶರಣ ಸಾಹಿತ್ಯ ಪರಿಷತ್ ಜಿಲ್ಲೆಯಲ್ಲಿ ಸಂಘಟನೆಯ ಜೊತೆಗ ದತ್ತಿ ಕಾರ್ಯಕ್ರಮಗಳ ಮೂಲಕ ಶರಣರ ವಿಚಾರಧಾರೆಗಳನ್ನು ಪ್ರಚುರು ಪಡಿಸುವಲ್ಲಿ ಶ್ರಮಿಸುತ್ತಿದೆ. ಕದಳಿ ಮಹಿಳಾ ವೇದಿಕೆಯು ಸಹ ಹೆಚ್ಚಿನ ಸಹಕಾರ ನೀಡುತ್ತಿದ್ದು, ದತ್ತಿ ಕಾರ್ಯಕ್ರಮಗಳು ಇನ್ನು ಹೆಚ್ಚು ನಡೆಯುವಂತೆ ಆಗಬೇಕು ಎಂದು ತಿಳಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಆರ್.ಎಸ್. ಸುರೇಶ್ ರಾಮಸಮುದ್ರ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ, ದತ್ತಿ ದಾನಿಗಳಾದ ನಾಗಶ್ರೀಪ್ರತಾಪ್, ಯನಗುಂಬ ವೈ.ಪಿ. ರಾಜೇಂದ್ರಪ್ರಸಾದ್, ಕಲಾವಿದ ಉಮ್ಮತ್ತೂರು ಬಸವರಾಜು, ಕಾರ್ಯದರ್ಶಿ ಅನ್ನಪೂರ್ಣಸ್ವಾಮಿ, ಪರಿಷತ್‌ನ ಎಂ.ಸುಂದರ್, ಆರ್.ಎಸ್. ಲಿಂಗರಾಜು, ಕದಳಿ ಮಹಿಳಾ ವೇದಿಕೆಯ ಯಳಂದೂರು ತಾಲೂಕು ಅಧ್ಯಕ್ಷೆ ಲಲಿತಾ, ರತ್ನಮ್ಮಬಸವರಾಜು, ರತ್ನಮ್ಮ, ಸುಂದ್ರಮ್ಮ, ವಿಜಯಾಂಬ, ವಿಜಯಕುಮಾರಿ, ಕಮಲಮ್ಮ, ಪದಾಧಿಕಾರಿಗಳು ಉಪಸ್ಥಿತರಿದ್ದರು.

## ನ್ಯಾಯಾಲಯದ ಆವರಣದಲ್ಲಿ ಅಂತರಾಷ್ಟ್ರೀಯ ಯೋಗ ದಿನ

ಗುಂಡ್ಲುಪೇಟೆ: ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಅಚರಣೆ ಮಾಡಲಾಯಿತು

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಯೋಗದ ಪ್ರಯೋಜನಗಳು ಹಾಗೂ ಯೋಗದಿಂದ ಮನುಷ್ಯನ ದೇಹ ಮತ್ತು ಮನಸ್ಸು ಎಷ್ಟು ಗಟ್ಟಿಯಾಗುತ್ತದೆ ಎಂಬುದರ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ನೂರುನ್ನೀಸಾ ರವರು ಪ್ರಧಾನ ಸಿವಿಲ್ ನ್ಯಾಯಧೀಶರಾದ ದೀಪು ಎಂ. ಟಿ , ಅಪರ ಸಿವಿಲ್ ನ್ಯಾಯಾಧೀಶರಾದ ಗಿರೀಶ್ ಆರ್. ಬಿ. ವಕೀಲರ ಸಂಘದ ಅಧ್ಯಕ್ಷರಾದ ವೆಂಕಟೇಶ್, ವಕೀಲರ ಸಂಘ ಕಾರ್ಯದರ್ಶಿ ಜವರಾಜು ಹಾಗೂ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು



# ಬೆಳೆವಿಮೆ ಯೋಜನೆ ಅನುಷ್ಠಾನಗೊಳಿಸಿ



ಚಾಮರಾಜನಗರ, 2026–27ರ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಇದರ ಪ್ರಯೋಜನವನ್ನು ರೈತರು ಪಡೆಯಲು ಅಧಿಕಾರಿಗಳು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಪ್ರಧಾನಮಂತ್ರಿ ಫಸಲ್ ಬಿಮಾ ವಿಮಾ ಯೋಜನೆ ಕುರಿತ ಜಿಲ್ಲಾ ಮಟ್ಟದ ಜಂಟಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಗ್ರಾಮ ಪಂಚಾಯಿತಿ, ಹೋಬಳಿ ಮಟ್ಟದಲ್ಲಿ ಅಧಿಸೂಚಿತ ಬೆಳೆಗಳನ್ನು ನಿಗದಿಪಡಿಸಿ ವಿಮೆ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಈ ವಿಮೆ ಯೋಜನೆಯ ಪ್ರಯೋಜನವನ್ನು ಬೆಳೆಸಾಲ ಪಡೆದ ಹಾಗೂ ಪಡೆಯದ ರೈತರು ಪಡೆಯಬಹುದಾಗಿದೆ ಎಂದರು. ಬ್ಯಾಂಕುಗಳು ರೈತರಿಗೆ ಬೆಳೆವಿಮೆ ಯೋಜನೆ ಪ್ರಯೋಜನ ಪಡೆಯಲು ಅನುಕೂಲವಾಗುವಂತೆ ಪೂರಕವಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡಬೇಕು. ಪ್ರತ್ಯೇಕ ಕೌಂಟರ್ ಗಳ ಮೂಲಕ ಬೆಳೆವಿಮೆಗೆ ಸಹಕರಿಸಬೇಕು. ಕೃಷಿ, ಕಂದಾಯ, ಸಹಕಾರ, ತೋಟಗಾರಿಕೆ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಬೆಳೆವಿಮೆ ಸಂಬಂಧ ಹಂಗಾಮಿನಲ್ಲಿ ಅಧಿಸೂಚಿಸಿರುವ ಬೆಳೆಗಳು, ಘಟಕಗಳ ಬಗ್ಗೆ ಬ್ಯಾಂಕುಗಳು, ರೈತ ಸಂಪರ್ಕ ಕೇಂದ್ರಗಳು ಮತ್ತು ಗ್ರಾಮ ಪಂಚಾಯಿತಿ ಕಚೇರಿಗಳ ಸೂಚನ ಫಲಕಗಳಲ್ಲಿ ಪ್ರಕಟಿಸಬೇಕು ಎಂದು ಹೇಳಿದರು.

ಬ್ಯಾಂಕುಗಳು ಸಂರಕ್ಷಣೆ ಪೋರ್ಟಲ್ ಮೂಲಕ ಬೆಳೆಸಾಲ ಪಡೆದ ಹಾಗೂ ಬೆಳೆಸಾಲ ಪಡೆಯದ ರೈತರಿಗೆ ಸಂಬಂಧಿಸಿದ ಪ್ರಸ್ತಾವನೆಗಳ ವಿವರಗಳನ್ನು ದಾಖಲಿಸಲು ಹಾಗೂ ರೈತರ ಪ್ರಸ್ತಾವನೆ ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ನಿಗದಿತ ದಿನದೊಳಗೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಇದೇ ವೇಳೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಕುರಿತ ಮಾಹಿತಿ ಕರಪತ್ರ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಪಂಚಾಯತ್ ಸಹಾಯಕ ಯೋಜನಾಧಿಕಾರಿ ಶ್ರೀಕಂಠರಾಜೇ ಅರಸ್, ಪ್ರಭಾರ ಜಂಟಿ ಕೃಷಿ ನಿರ್ದೇಶಕರಾದ ಡಾ. ಯು.ಹೆಚ್. ಭಾನುಪ್ರಕಾಶ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಬಿ.ಆರ್. ಗಿರೀಶ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕೆ.ಪಿ. ಪವನ್ ಕುಮಾರ್, ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿಯ ಪ್ರತಿನಿಧಿ ಟಿ.ಸಿ. ಪ್ರೀತುಶ್ರೀ, ಕೃಷಿಕ ಸಮಾಜದ ಅಧ್ಯಕ್ಷರಾದ ಚಿಕ್ಕಸ್ವಾಮಿ, ರೈತ ಮುಖಂಡರಾದ ಹೊನ್ನೂರು ಬಸವಣ್ಣ, ನಟರಾಜು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಎಲ್ಲಾ ಕಡೆಗಳಲ್ಲಿಯೂ ಕೆಂಪೇಗೌಡ ಜಯಂತಿ ಆಚರಣೆಗೆ ಒತ್ತಾಯ

ಮೈಸೂರು: ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಸರ್ಕಾರದಿಂದ ಅಧಿಕೃತವಾಗಿ ಆಚರಿಸುತ್ತಿದ್ದರೂ, ಇದು ಕೇವಲ ಕಾಟಾಚಾರಕ್ಕೆ ಎಂಬಂತೆ ನಡೆಯುತ್ತಿದೆ. ಈ ಹಿನ್ನಲೆಯಲ್ಲಿ ಇತರೆ ಜಯಂತಿಗಳಂತೆ ಕೆಂಪೇಗೌಡ ಜಯಂತಿಯನ್ನು ಎಲ್ಲಾ ಕಡೆಗಳಲ್ಲಿಯೂ ಆಚರಿಸಬೇಕೆಂದು ಜಿಲ್ಲಾ ಒಕ್ಕಲಿಗ ಸಂಘಟನೆಗಳ ಒಕ್ಕೂಟದ ಪದಾಧಿಕಾರಿ ಸತೀಶ್‌ಗೌಡ ಬೀಚನಹಳ್ಳಿ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜೂ.27ರಂದು ಶ್ರೀ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಆಚರಿಸುವಾಗ ಕೇವಲ ಒಂದೆಡೆ ವೇದಿಕೆ ಕಾರ್ಯಕ್ರಮಕ್ಕೆ ಸೀಮಿತಗೊಳಿಸಿರುವುದು ಸರಿಯಲ್ಲ. ಇತರೆ ಜಯಂತಿಗಳ ರೀತಿ ಗ್ರಾ.ಪಂ. ಮಟ್ಟದಲ್ಲಿ ಹಾಗೂ ಪ್ರತಿ ಸರ್ಕಾರಿ ಶಾಲಾ ಕಾಲೇಜು, ಕಚೇರಿಗಳ ಮಟ್ಟದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಆಗ್ರಹಿಸಿದರು. ಕೆಂಪೇಗೌಡ ಜಯಂತೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಪ್ರಶಾಂತಗೌಡ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ.ಶ್ರೀಧರ್, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕ ಎ.ರವಿ, ಗಿರೀಶ್, ಗುರುರಾಜ್ ಇನ್ನಿತರರು ಇದ್ದರು.



# ಶ್ರದ್ಧೆ, ಏಕಾಗ್ರತೆ ಸೂಪರ್ ಪವರ್




ಗುಂಡ್ಲುಪೇಟೆ. ಶ್ರೀ ಮದ್ದಾನೇಶ್ವರ ಜೆಎಸ್‌ಎಸ್ ಪ್ರೌಢಶಾಲೆ ಪಡುಗೂರು ಇಲ್ಲಿ ಹಮ್ಮಿಕೊಂಡಿದ್ದ ಸ್ಫೂರ್ತಿ ಸಿಂಚನ ಮತ್ತು ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು

ಜಗತ್ತಿನ ಸೂಪರ್ ಪವರ್ ಎಂದರೆ ಶ್ರದ್ಧೆ ಮತ್ತು ಏಕಾಗ್ರತೆ ಅದರ ಮೂಲಕ ಎಂತಹ ಕಷ್ಟದ ಪರಿಸ್ಥಿತಿಯಲ್ಲೂ ಮನುಷ್ಯ ಪುಟಿದು ಏಳುತ್ತಾನೆ ಎಂದು ಸಂಸ್ಕೃತಿ ಚಿಂತಕ ಪೃಥ್ವಿರಾಜ್ ಎಚ್ ಎಂ ಅಭಿಪ್ರಾಯ ಪಟ್ಟರು. ವಿದ್ಯಾವಂತರಾಗುವುದು ಸುಲಭ ಆದರೆ ಶ್ರದ್ಧಾಂತರಾಗುವುದು ಕಷ್ಟ ಮೊದಲು ವಿದ್ಯಾ ರ್ಥಿಗಳು ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು ಟಿಎಸ್ ಹೀಲಿಯಟ್ ಎನ್ನುವ ಕವಿ ಹೇಳು ವಾಗ ನಿಶ್ಚಿಂತೆಯಾಗಿ ಕುಳಿತುಕೊಳ್ಳುವುದನ್ನು ಮೊದಲು ಕಲಿಸು ಎಂದು ಹೇಳಿದ್ದಾರೆ ಎಂದರೆ ಇಲ್ಲಿ ಕುಳಿತುಕೊಳ್ಳುವುದು ಎಂದರೆ ಕೇವಲ ನೆಲದ ಮೇಲೆ ಎನ್ನುವ ಅರ್ಥವಲ್ಲ ಜೀವನ ಎನ್ನುವ ನೆಲದ ಮೇಲೆ ಕುಳಿತುಕೊಳ್ಳಬೇಕಾದರೆ ಶ್ರದ್ಧೆ ಬಹಳ ಮುಖ್ಯ

ಒಂದು ದೇಶದ ಸೋಲು ಎಂದರೆ ಕೇವಲ ಯುದ್ಧವಲ್ಲ ದೇಶದ ಮಕ್ಕಳು ಶಾಲೆಯ ಮೈದಾನ ಮತ್ತು ತರಗತಿಯನ್ನು ಬಿಟ್ಟು ಬಾರ್ ಮತ್ತು ಪಬ್ ಗಳಿಗೆ ತೆರಳುತ್ತಾರೋ ಅದು ಆ ದೇಶದ ಸೋಲು ಎಂದು ದಾರ್ಶನಿಕರು ಅಭಿಪ್ರಾಯಪಡುತ್ತಾರೆ

ಹಾಗಾಗಿ ಛಲದ ಕನಸುಗಳ ಬಡತನ ನಮ್ಮಲ್ಲಿದೆ ನಾವು ಒಳ್ಳೆಯ ಕನಸುಗಳನ್ನು ಕಾಣುತ್ತಿಲ್ಲ ಏಕೆಂದರೆ ಒಳ್ಳೆಯ ಯೋಚನೆಗಳನ್ನು ಮಾಡುತ್ತಿಲ್ಲ ವಿದ್ಯಾರ್ಥಿಗಳಾದ ನೀವೆಲ್ಲ ಉತ್ತಮ ಆಲೋಚನೆಯನ್ನು ಬೆಳೆಸಿಕೊಂಡು ಉತ್ತಮ ಅಂಕಗಳ ಜೊತೆಗೆ ಯೋಗ್ಯ ಬದುಕನ್ನು ಬದುಕಿ ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು ಈ ಇದೆ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ಭವಾನಿ ಶಂಕರ್ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪ್ರಕಾಶ್ ಮತ್ತು ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಪೋಷಕರು ಹಾಜರಿದ್ದರು

## ನಾಳೆ ಶ್ರೀ ದುರ್ಗಾ ಸಪ್ತಶತಿಃ ಪಾರಾಯಣ, ಚಂಡಿಕಾಯಾಗ




ಮೈಸೂರು: ಕನ್ನೆಗೌಡನ ಕೊಪ್ಪಲಿನ ಶ್ರೀ ಯಶೋಧಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕ ಕಲ್ಯಾಣಾರ್ಥವಾಗಿ ಜೂ.22ರ ಸಂಜೆ 5ರಿಂದ ಮಾರನೇ ದಿನವಾದ 23ರ ಮಧ್ಯಾಹ್ನದವರೆಗೆ ಮೆಟ್ರೋಪೋಲ್ ವೃತ್ತದ ಬಳಿಯ ನಂಜರಾಜ ಬಹದ್ದೂರ್ ಛತ್ರದಲ್ಲಿ ಶ್ರೀ ದುರ್ಗಾ ಸಪ್ತಶತಿಃ ಪಾರಾಯಣ ಹಾಗೂ ಚಂಡಿಕಾ ಯಾಗ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ನ ನಾಗಭೂಷಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆರಂಭದಲ್ಲಿ ಸೋಮನಾಥ ಸ್ವಾಮೀಜಿ, ಡಾ. ಭಾಷ್ಯಂ ಸ್ವಾಮೀಜಿ, ಸ್ವಾಮಿ ಮುಕ್ತಿದಾನಂದಜಿ ಸಾನ್ನಿಧ್ಯ ವಹಿಸುವರು, ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು, ಚಂಡಿಕಾ ಯಾಗದ ವೇಳೆ ವಿವಿಧ ಭಜನಾ ಮಂಡಳಿಗಳು ಸಾಮೂಹಿಕ ಭಜನೆ ನಡೆಸಿಕೊಡಲಿವೆ. ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಇದೆ ಎಂದರು. ಮಾದೇಶ್, ರವಿ, ವೆಂಕಟೇಶ್, ಸೂರ್ಯ ನಾರಾಯಣ ಭಟ್, ಸುಬ್ಬರಾವ್, ಪುಟ್ಟಸ್ವಾಮಿ ಇದ್ದರು.

## 13 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿಯ ವಾರ್ಷಿಕ ತರಬೇತಿ



ಮೈಸೂರು: ಮೈಸೂರು ಗ್ರೂಪ್ ಹೆಚ್‌ಕ್ಯೂ ಎನ್‌ಸಿಸಿಯ ಅಡಿಯಲ್ಲಿ ಕಾರ್ಯನಿರ್ವಹಿಸುವ 13 ಕರ್ನಾಟಕ ಬೆಟಾಲಿಯನ ಎನ್‌ಸಿಸಿಯ ಸಂಯೋಜಿತ ವಾರ್ಷಿಕ ತರಬೇತಿ ಶಿಬಿರ, ಟಿಎಸ್‌ಸಿ–ಖಖವನ್ನು ಪೊಲೀಸ ತರಬೇತಿ ಶಾಲೆ ಜೂ.20ರವರೆಗೆ ಶಿಬಿರ ಕಮಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಸಂಜೀವ ಯಮನಪ್ಪ ಕೊಡತೆ ಮತ್ತು ಉಪ ಶಿಬಿರ ಕಮಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಅರುಣ ಪ್ರಕಾಶ ಮೌರ್ಯ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ 113 ಟಿಎಸ್‌ಸಿ ಕೆಡೆಟ್‌ಗಳು ಸೇರಿದಂತೆ ಮೈಸೂರು ಗ್ರೂಪ್‌ನ ವಿವಿಧ ಘಟಕಗಳಿಂದ ಒಟ್ಟು 593 ಕೆಡೆಟ್‌ಗಳು ಭಾಗವಹಿಸಿದರು. ಇದರೊಂದಿಗೆ 2 ಅಧಿಕಾರಿ, 6 ಎಎನ್‌ಒ, 27 ಪಿಐ ಸಿಬ್ಬಂದಿ, 2 ಜಿಸಿಐ, 6 ನಾಗರಿಕ ಕಚೇರಿ ಸಿಬ್ಬಂದಿ ಸೇರಿ ಒಟ್ಟು 634 ಜನರ ಆಹಾರ ವ್ಯವಸ್ಥೆ ಹೊಂದಿದ್ದ ಶಿಬಿರ ಇದಾಗಿತ್ತು. ಶಿವಕುಮಾರ, ಪ್ರಭುಸ್ವಾಮಿ, ಮಂಜುನಾಥ, ಶಶಿಕುಮಾರ, ಲಕ್ಷ್ಮಿ ಮತ್ತು ಪ್ರಸನ್ನ ಎಂಬ ವಿವಿಧ ಶಾಲಾ–ಕಾಲೇಜುಗಳ ಎಎನ್‌ಒಗಳು ಶಿಬಿರದ ತರಬೇತಿ ಮತ್ತು ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಗ್ರೂಪ್ ಕಮಾಂಡರ್ ಕರ್ನಲ್ ರೋಹಿತ ಠಾಕೂರ 2026ರ ಜೂ.18ರಂದು ಶಿಬಿರ ಸ್ಥಳಕ್ಕೆ ಭೇಟಿ ನೀಡಿದರು. ಕಳೆದ 8 ದಿನಗಳಿಂದ ತರಬೇತಿಯಲ್ಲಿದ್ದ 81 ಸಹಾಯಕ ಎನ್‌ಸಿಸಿ ಅಧಿಕಾರಿಗಳು (ಎನ್‌ಒಗಳು) ಮತ್ತು 593 ಕೆಡೆಟ್‌ಗಳನ್ನು ಉದ್ದೇಶಿಸಿ ಮಾತನಾಡಿದರು. ವಿಜೇತ ತಂಡಗಳು ಮತ್ತು ವೈಯಕ್ತಿಕ ಸಾಧಕರಿಗೆ ಬಹುಮಾನ ವಿತರಿಸಿದರು. ಕೆಡೆಟ್‌ಗಳ ಉತ್ಸಾಹ ಮತ್ತು ಉನ್ನತ ಮಟ್ಟದ ತರಬೇತಿಯನ್ನು ಶ್ಲಾಘಿಸಿದರು. ಪಿಟಿಎಸ್‌ನ ಉಸ್ತುವಾರಿ ಪ್ರಾಂಶುಪಾಲ ಅಡಿಷನಲ್ ಎಸ್‌ಪಿ ಸಿ.ಮಲ್ಲಿಕ್ ಸಂಪೂರ್ಣ ಸಹಕಾರದೊಂದಿಗೆ ಶಿಬಿರವು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಅವರು ಕಾನೂನು ಮತ್ತು ಸೈಬರ್ ಸುರಕ್ಷತೆಯ ಕುರಿತು ಕೆಡೆಟ್‌ಗಳನ್ನು ಉದ್ದೇಶಿಸಿ ಮಾತನಾಡಲು ಸಮಯ ಮೀಸಲಿಟ್ಟರು.

# ಮಸಣಾಪುರ ಪ್ರಕರಣ: ಶಾಂತಿಸಭೆ

## ಸೌಹಾರ್ದತೆ ಕಾಪಾಡಲು ಚಾಮರಾಜನಗರ ಜಿಲ್ಲಾಧಿಕಾರಿ ಎಸ್ಪಿ ನೇತೃತ್ವದಲ್ಲಿ ಸಭೆ

ಚಾಮರಾಜನಗರ: ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ನಡೆದ ಘಟನೆಗೆ ಸಂಬಂಧಿಸಿದಂತೆ, ಎರಡು ಸಮುದಾಯಗಳ ನಡುವೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಶಾಂತಿ ಸಭೆಯು ಯಶಸ್ವಿಯಾಗಿದೆ.

ಜಿಲ್ಲಾಧಿಕಾರಿ ಶಿಲ್ಪಾನಾಗ್ (ಶ್ರೀರೂಪಾ) ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಎರಡೂ ಸಮುದಾಯಗಳ ಮುಖಂಡರಿಂದ ಮುಕ್ತ ಅಭಿಪ್ರಾಯಗಳನ್ನು ಪಡೆದುಕೊಳ್ಳಲಾಯಿತು. ಯಾವುದೇ ರೀತಿಯ ಗಲಭೆಗಳಿಗೆ ಆಸ್ಪದ ನೀಡದೆ ಕೋಮು ಸೌಹಾರ್ದತೆಯನ್ನು ಕಾಪಾಡುವಂತೆ ಅಧಿಕಾರಿಗಳು ಮನವಿ ಮಾಡಿದ್ದು, ಇದಕ್ಕೆ ಮುಖಂಡರು ಸಕಾರಾತ್ಮಕವಾಗಿ ಸ್ಪಂದಿಸಿ ಸೌಹಾರ್ದತೆಯ ಭರವಸೆ ನೀಡಿದ್ದಾರೆ. ತಾವು ಅಧಿಕಾರ ವಹಿಸಿಕೊಂಡ ನಂತರ ಇದು ಮೂರನೇ ಶಾಂತಿ ಸಭೆಯಾಗಿದ್ದು, ಮುಖಂಡರು ಇಷ್ಟೊಂದು ಸೌಹಾರ್ದತೆಯಿಂದ ಮಾತನಾಡುತ್ತಾರೆ ಎಂದು ಭಾವಿಸಿರಲಿಲ್ಲ ಎಂದು ಜಿಲ್ಲಾಧಿಕಾರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲೆಯ ಅಭಿವೃದ್ಧಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಶಾಂತಿ ಕಾಪಾಡುವುದು ಎಲ್ಲರ ಕರ್ತವ್ಯ ಎಂದೂ ಅವರು ತಿಳಿಸಿದರು.

### ಕೋಮು ಸೌಹಾರ್ದತೆ ಮತ್ತು ನಿಷ್ಪಕ್ಷಪಾತ ತನಿಖೆಯ ಭರವಸೆ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಮಾತನಾಡಿ, ಬುದ್ಧ ಜಗತ್ತಿಗೆ ಪರಿಚಯಿಸಿದ ಮಾನವ ಕೇಂದ್ರಿತ ಧರ್ಮದ ಕುರಿತು ಎರಡು ಸಮುದಾಯಗಳ ಮುಖಂಡರಲ್ಲಿ ತಿಳುವಳಿಕೆ ಇರುವುದು ಉತ್ತಮ



ಬೆಳವಣಿಗೆಯಾಗಿದೆ ಎಂದರು. ನಮಗೆ ಹಕ್ಕುಗಳನ್ನು ಮತ್ತು ಕಾನೂನನ್ನು ಕೊಟ್ಟ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿರುವುದು ಖಂಡನೀಯ ಎಂದು ಹೇಳಿದ ಅವರು, ಮಸಣಾಪುರ ಮತ್ತು ಹೊಂಗನೂರು ಗ್ರಾಮಗಳಲ್ಲಿ ನಡೆದ ಪ್ರಕರಣಗಳನ್ನು ಪೊಲೀಸ್ ಇಲಾಖೆಯು ಅತ್ಯಂತ ನಿಷ್ಪಕ್ಷಪಾತವಾಗಿ ತನಿಖೆ ಮಾಡಲಿದೆ ಎಂದು ಭರವಸೆ ನೀಡಿದರು. ತಾವು ಯಾವುದೇ ಭಯದಿಂದ ಪ್ರತಿಭಟನೆಗಳನ್ನು ತಡೆಯುತ್ತಿಲ್ಲ, ಆದರೆ ಪ್ರತಿಭಟನೆಗಳ ನೆಪದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ಬರಬಾರದು ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಹೊಡೆತ ಬೀಳಬಾರದು ಎಂಬುದು ಇಲಾಖೆಯ ಆಶಯವಾಗಿದೆ ಎಂದು ಸ್ಪಷ್ಟಪಡಿಸಿದರು.

### ಅಂಬೇಡ್ಕರ್ ಮಹಾಸಭಾ ಮುಖಂಡರ ನಿಲುವು ಮತ್ತು ಬೇಡಿಕೆ

ಸಭೆಯಲ್ಲಿ ಅಂಬೇಡ್ಕರ್ ಮಹಾಸಭಾದ ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿ, ತಮ್ಮ ಸಮಾಜವು ಅಂಬೇಡ್ಕರ್ ಅವರನ್ನು ತಂದೆ–ತಾಯಿಗಿಂತಲೂ ಹೆಚ್ಚಾಗಿ ಗೌರವಿಸುತ್ತದೆ ಎಂದರು. ಮಸಣಾಪುರದಲ್ಲಿ ಕೃತ್ಯ ಎಸಗಿದ ವ್ಯಕ್ತಿಯನ್ನು ವೈಯಕ್ತಿಕ ದೃಷ್ಟಿಯಿಂದ ನೋಡಬೇಕೇ ಹೊರತು ಯಾವುದೇ ಸಮುದಾಯದ ಕೋನದಿಂದ ನೋಡಬಾರದು ಎಂದು ವಿನಂತಿಸಿದರು. ತಾವು ಯಾವುದೇ ಸಮುದಾಯದ ವಿರುದ್ಧ ಪ್ರತಿಭಟನೆಗೆ ಮುಂದಾಗಿರಲಿಲ್ಲ, ಕೇವಲ ಅಂಬೇಡ್ಕರ್ ಅವರಿಗೆ ಆದ ಅಪಮಾನದ ವಿರುದ್ಧ ಕಠಿಣ ಕಾನೂನು ಕ್ರಮಕ್ಕಾಗಿ ಜೂನ್ 23 ರಂದು ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಅವಕಾಶ ನೀಡಬೇಕು ಎಂದು ಕೋರಿದರು. ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್ ಮಾತನಾಡಿ, ಹಿಂದೆ ಮಂಗಲ ಮತ್ತು ಹರದನಹಳ್ಳಿ ಗ್ರಾಮಗಳಲ್ಲಿ ಇಂತಹ ಘಟನೆಗಳು ನಡೆದಾಗ ಎರಡೂ ಸಮುದಾಯಗಳು ಕುಳಿತು ಬಗೆಹರಿಸಿಕೊಂಡ ಇತಿಹಾಸವನ್ನು ನೆನಪಿಸಿದರು. ಮತ್ತೊಬ್ಬ ಮುಖಂಡ ಆರ್.ಮಹದೇವ್ ಮಾತನಾಡಿ, ಆರೋಪಿ ಮಾನಸಿಕ ಅಸ್ವಸ್ಥನಾಗಿದ್ದರೆ ಕೇವಲ ಅಂಬೇಡ್ಕರ್ ಭಾವಚಿತ್ರವನ್ನೇ ಏಕೆ ಗುರಿ ಮಾಡಿದ್ದಾನೆ, ಇದರ ಹಿಂದೆ ಹುನ್ನಾರ ಅಡಗಿದೆ ಎಂದು ಶಂಕೆ ವ್ಯಕ್ತಪಡಿಸಿದರು.

### ಉಪ್ಪಾರ ಸಮುದಾಯದ ಮುಖಂಡರ ಆಕ್ಷೇಪ ಮತ್ತು ತನಿಖೆಗೆ ಒತ್ತಾಯ

ಇದೇ ಸಂದರ್ಭದಲ್ಲಿ ಉಪ್ಪಾರ ಸಮುದಾಯದ ಮುಖಂಡ ಮಾದೇಶ್ ಉಪ್ಪಾರ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ನಡೆದಿರುವ ಅಪಮಾನವನ್ನು ತಾವು ಕೂಡ ಬಲವಾಗಿ ಖಂಡಿಸುವುದಾಗಿ ಮತ್ತು ಆರೋಪಿಗೆ ಕಠಿಣ ಶಿಕ್ಷೆಯಾಗಲಿ ಎಂದು ಒತ್ತಾಯಿಸುವುದಾಗಿ ತಿಳಿಸಿದರು. ಆದರೆ, ಇದೇ ಪ್ರಕರಣದ ಆರೋಪಿ ಚಂದ್ರು ಎಂಬಾತನ ಮೇಲೆ ಹಲ್ಲೆ ನಡೆಸಿ ಅಮಾನವೀಯವಾಗಿ ನಡೆದುಕೊಳ್ಳಲಾಗಿದೆ, ಈ ಬಗ್ಗೆಯೂ ಸೂಕ್ತ ತನಿಖೆಯಾಗಬೇಕು ಎಂದು ಆಗ್ರಹಿಸಿದರು. ಮುಖಂಡ ಬಾಗಳಿ ರೇವಣ್ಣ ಮಾತನಾಡಿ, ಅಂಬೇಡ್ಕರ್ ಅವರಿಗೆ ಮಾಡಿದ ಅಪಮಾನವನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಆದರೆ ಕಾನೂನನ್ನು ಕೈಗೆತ್ತಿಕೊಂಡು ಆರೋಪಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವುದು ಸರಿಯಲ್ಲ, ಈ ವಿಚಾರದಲ್ಲಿ ನಿಷ್ಪಕ್ಷಪಾತ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

### ಪ್ರತಿಭಟನೆಗಳನ್ನು ಕೈಬಿಡಲು ಮುಖಂಡರ ತೀರ್ಮಾನ

ಮಸಣಾಪುರ ಹಾಗೂ ಹೊಂಗನೂರು ಗ್ರಾಮಗಳಲ್ಲಿ ನಡೆದ ಘಟನೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿದ ಮುಖಂಡರು, ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ಮನವಿಗೆ ಗೌರವ ನೀಡಿ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ್ದ ಪ್ರತಿಭಟನೆಗಳನ್ನು ಕೈಬಿಡಲು ಒಮ್ಮತದ ನಿರ್ಧಾರ ಪ್ರಕಟಿಸಿದರು. ಈ ಪ್ರಮುಖ ಶಾಂತಿ ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಮೋನಾರೋತ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ತಹಸೀಲ್ದಾರ್ ಗಿರಿಜಾ, ಡಿವೈಎಸ್ಪಿ ಸ್ನೇಹಾ ರಾಜ್ ಸೇರಿದಂತೆ ಎರಡು ಸಮುದಾಯಗಳ ಪ್ರಮುಖ ಮುಖಂಡರು ಉಪಸ್ಥಿತರಿದ್ದು, ಶಾಂತಿ ಸ್ಥಾಪನೆಗೆ ಸಹಕರಿಸಿದರು.

# ಬೇಗೂರಿನಲ್ಲಿ ಹನುಮ ಜಯಂತಿ

ಗುಂಡ್ಲುಪೇಟೆ: ತಾಲ್ಲೂಕಿನ ಬೇಗೂರು ಗ್ರಾಮದಲ್ಲಿ ಹನುಮ ವಿಗ್ರಹ ಹಾಗೂ ಶ್ರೀ ರಾಮನ ವಿಗ್ರಹ ವನ್ನು ವಿವಿಧ ಕಲಾತಂಡಗಳು, ತಮಟೆ,ನಗಾರಿ ಮೂಲಕ ಮೆರವಣಿಗೆಯು ವಿಜೃಂಭಣೆಯಿಂದ ನಡೆಸಲಾಯಿತು.

ಬೇಗೂರಿನ ಹೊರವಲಯದಲ್ಲಿ ಇರುವ ಬಂಡಿಗೆರೆ ಮಹದೇಶ್ವರ ದೇವಸ್ಥಾನದ ಆವರಣದಿಂದ ಹೊರಟಮೆರವಣಿಗೆ ರಾಷ್ಟ್ರೀಯ ಹೆದ್ದಾರಿ ಮಾರ್ಗವಾಗಿ ಬೇಗೂರಿನಲ್ಲಿ ಸಾಗಿಬಂತು, ಕೇಸರಿ ಹನುಮ ಬಾವುಟಗಳ ಹಾರಾಟ ನಡುವ ಯುವ ಸಮೂಹ ನಗಾರಿ ತಮಟೆ ಶಬ್ದಕ್ಕೆ ಕುಣಿದು ಕುಪ್ಪಲಿಸಿದರು. ಹನುಮ ಜಯಂತಿಗೆ ಆಗಮಿಸಿದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು, ಪೊಲೀಸರು ಸೂಕ್ತ ಭದ್ರತೆ ವಹಿಸಿದರು, ಹನುಮ ಜಯಜತಿ ಆಯೋಜಕರು ವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜಿಸಿದ್ದರು.



# ಸಿಎಂ ಕಾಮಗಾರಿಗಳ ಕೆಲಸಗಳನ್ನು ಚುರುಕುಗೊಳಿಸಿ

**ಮೈಸೂರು:** ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.80ರಷ್ಟು ಅನುದಾನ ಬಿಡುಗಡೆಯಾಗಿರುತ್ತದೆ. ಕೆಲಸ ಚುರುಕುಗೊಳಿಸಿ ಕಾಮಗಾರಿ ಪ್ರಾರಂಭಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಅವರು ಇಂದು ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನಡೆದ ಮುಖ್ಯಮಂತ್ರಿಗಳ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಈಗಾಗಲೇ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಬಳಸಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದಲ್ಲಿ ಹೊಸದಾಗಿ ಅನುದಾನ ನೀಡುವುದಿಲ್ಲ. ಅನುಷ್ಠಾನ ಇಂಜಿನಿಯರಿಂಗ್ ಇಲಾಖೆಗಳು ಕಾಮಗಾರಿಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ 18.75 ಕೋಟಿ ರೂ, ಚಾಮರಾಜ ವಿಧಾನಸಭಾ ಕ್ಷೇತ್ರದ 36.05 ಕೋಟಿ ರೂ ಹಾಗೂ ನರಸಿಂಹ ರಾಜ ವಿಧಾನಸಭಾ ಕ್ಷೇತ್ರದ 35 ಕೋಟಿ ರೂ ವೆಚ್ಚದ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳುತ್ತಿದ್ದು, ಬಾಕಿ ಇರುವ 7 ಪ್ಯಾಕೇಜ್ ಗಳ ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸುವಂತೆ ತಿಳಿಸಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರಿಗೆ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಮುಜರಾಯಿಗೆ ಸಂಬಂಧಿಸಿದ 3 ಕೋಟಿ ರೂ ವೆಚ್ಚದಲ್ಲಿ 5 ರಿಂದ 10 ಲಕ್ಷ ರೂ ವೆಚ್ಚದಲ್ಲಿ 46



ಕಾಮಗಾರಿಗಳಿದ್ದು, 14 ಕೆಲಸ ಪ್ರಗತಿಯಲ್ಲಿದ್ದು, 32 ಕೆಲಸಗಳು ಅಗ್ರಿಮೆಂಟ್ ಮಾಡಿಕೊಳ್ಳಬೇಕಿದ್ದು ಶೀಘ್ರವಾಗಿ ಪ್ರಾರಂಭಿಸಬೇಕು

ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ಮಿತಿ ಕೇಂದ್ರದವರಿಗೆ ನೀಡಲಾಗಿರುವ ಕೆಲಸಗಳಿಗೆ 15 ದಿನದೊಳಗೆ ಆಡಳಿತಾತ್ಮಕ ಅನುಮೋದನೆ ಪಡೆದು ಕೆಲಸಗಳನ್ನು ಪ್ರಾರಂಭಿಸಬೇಕು. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಮುಜರಾಯಿ ಕಾಮಗಾರಿಗಳಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ತೊಂದರೆ ಇದ್ದಲ್ಲಿ ಬಗೆಹರಿಸಿಕೊಂಡು ಕಾಮಗಾರಿಗಳು ಪ್ರಾರಂಭಿಸಿ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಂಜು, ನಿರ್ಮಿತಿ ಕೇಂದ್ರದ ಪಿ.ಡಿ.ಮಹೇಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

**ಪಿ. ಮರಿಸ್ವಾಮಿ ಹೇಳಿಕೆ । ನಂಜೇದೇವನಪುರದಲ್ಲಿ ಐಸಿಡಿಎಸ್ ಕಾನ್ವೆಂಟ್ ಪ್ರಾರಂಭೋತ್ಸವಕ್ಕೆ ಚಾಲನೆ**

# ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಗುಣಮಟ್ಟದ ಶಿಕ್ಷಣ ಅತ್ಯಗತ್ಯ

ಚಾಮರಾಜನಗರ, ಬೆಳೆಯುವ ಪೈರನ್ನು ಮೊಳಕೆಯಲ್ಲಿಯೇ ನೋಡು ಎಂಬ ನಾಣ್ನುಡಿಯಂತೆ ಚಿಕ್ಕ ವಯಸ್ಸಿನಿಂದಲೇ ಗುಣಮಟ್ಟದ ಶಿಕ್ಷಣ ದೊರೆತಾಗ ಆ ಮಕ್ಕಳು ದೇಶದ ಆಸ್ತಿಗಳಾಗುತ್ತಾರೆ ಎಂದು ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ತಿಳಿಸಿದರು.

ತಾಲೂಕಿನ ನಂಜೇದೇವನಪುರ ಅಂಗನವಾಡಿಯಲ್ಲಿ ಐಸಿಡಿಎಸ್ ಕಾನ್ವೆಂಟ್ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪೋಷಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಬೇಕು ಎಂಬ ಉದ್ದೇಶದಿಂದ ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದಾರೆ. ಅಲ್ಲಿ ದೊರೆಯುವ ಸೌಲಭ್ಯವನ್ನು ಸರ್ಕಾರಿ ಶಾಲೆ ಹಾಗು ಅಂಗನವಾಡಿಗಳಲ್ಲಿ ನೀಡಿದರೆ, ಮಕ್ಕಳನ್ನು ಸೇರಿಸಲು ಉತ್ಸುಕರಾಗುತ್ತಾರೆ ಎಂಬುದಕ್ಕೆ ನಮ್ಮ ಗ್ರಾಮದ ಅಂಗನವಾಡಿ ಕೇಂದ್ರ ಪ್ರಮುಖ ನಿದರ್ಶನವಾಗಿದೆ ಎಂದರು.

ಅಂಗನವಾಡಿ ಕಾರ್ಯಕರ್ತೆ ಗುರುಲಿಂಗಮ್ಮ ಅವರು ಈ ಹಿಂದೆಯೇ ಅಂಗನವಾಡಿಯನ್ನು ಕಾನ್ವೆಂಟ್ ಆಗಿ ಪರಿವರ್ತನೆ ಮಾಡಿ, ಮಕ್ಕಳು ಹಾಗೂ



ಪೋಷಕರನ್ನು ಅಕರ್ಷಣೆ ಮಾಡಿದ್ದರು. ಕಳೆದ ಹಲವು ವರ್ಷಗಳ ಹಿಂದೆ ಈ ಅಂಗನವಾಡಿಯಲ್ಲಿ ಐಸಿಡಿಎಸ್ ಕಾನ್ವೆಂಟ್ ಆರಂಭವಾಗಿತ್ತು. ನಾನೇ ಇದನ್ನು ಚಾಲನೆ ನೀಡಿದ್ದೆ. ಇಂದು ಸರ್ಕಾರ ಆದೇಶದಂತೆ ಎಲ್ಲಾ ಅಂಗನವಾಡಿಗಳನ್ನು ಕಾನ್ವೆಂಟ್ ಆಗಿ ಪರಿವರ್ತನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಪ್ರತಿನಿಧಿಯಾಗಿ, ನಮ್ಮ ಗ್ರಾಮದಲ್ಲಿ ಕಾನ್ವೆಂಟ್ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿರುವುದು ಹೆಮ್ಮೆ ಎನ್ನಿಸಿದೆ. ಇದೊಂದು ಮಾದರಿ ಅಂಗನವಾಡಿಯಾಗಿದೆ. ಬಹಳಷ್ಟು ವಿಶೇಷತೆಗಳು ಈ ಅಂಗನವಾಡಿಯಲ್ಲಿ ನಾವು ನೋಡಿದ್ದೇವೆ. ಕಳೆದ 30 ವರ್ಷಗಳಿಂದ ಗುರುಮಲ್ಲಮ್ಮ ಅವರು ಜನ ಮನ್ನಣೆಯನ್ನು ಪಡೆದುಕೊಳ್ಳುವ ಜೊತೆಗೆ ಸರ್ಕಾರದ ಯಾವುದೇ ಯೋಜನೆಗಳು ಅಂಗನವಾಡಿ ಮುಖಾಂತರ ಬಂದಂತಹ ಸಂದರ್ಭದಲ್ಲಿ ಬಹಳ ಶ್ರದ್ದೆಯಿಂದ ಜನರಿಗೆ ತಲುಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಕಾನ್ವೆಂಟ್ ಸಹ ಉತ್ತಮ ಯಶಸ್ಸು ಪಡೆದುಕೊಳ್ಳಲಿ ಎಂದು ತಂಡಕ್ಕೆ ಶುಭ ಕೋರಿದರು.

ಅಂಗನವಾಡಿ ಕಾರ್ಯಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಮಣ ಮಾತನಾಡಿ, ಸರ್ಕಾರ ಅಂಗನವಾಡಿಯನ್ನು ಮೇಲ್ರ್ದಜೆಗೇರಿಸುವ ನಿಟ್ಟಿನಲ್ಲಿ ಅಂಗನವಾಡಿಯನ್ನು ಕಾನ್ವೆಂಟ್ ಆಗಿ ಪರಿವರ್ತನೆ ಮಾಡಿ, ಎಲ್‌ಕೆಜಿ, ಯುಕೆಜಿಯನ್ನು ಆರಂಭಿಸಲು ಅನುಮತಿ ನೀಡಿದೆ. ಈ ಹಿಂದೆ 1991ರಲ್ಲಿ ಟಿ ನರಸೀಪುರದಲ್ಲಿ ಅಂಗನವಾಡಿ ಕೇಂದ್ರಗಳು ಪ್ರಾಯೋಗಿಕವಾಗಿ ಪ್ರಾರಂಭಗೊಂಡಿದ್ದವು. 2019 ರಲ್ಲಿ ಐಸಿಡಿಎಸ್ ಕಾನ್ವೆಂಟ್ ಅನ್ನು ಪ್ರಪ್ರಥಮವಾಗಿ ಪ್ರಾಯೋಗಿಕವಾಗಿ ಅನೇಕ ಅಂಗನವಾಡಿಗಳಲ್ಲಿ ಪ್ರಾರಂಭಿಸಿ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಅಂಗನವಾಡಿಗಳಿಗೆ ವಿಸ್ತರಣೆ ಮಾಡಲಾಗಿದೆ, ಪೋಷಕರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದರು.


ಅಂಗನವಾಡಿಯ ಉತ್ತಮ ಶಿಕ್ಷಕಿಯಾದ ಕರಿನಂಜನಪುರ ಕೇಂದ್ರದ ಶಾರದ ಮಾತನಾಡಿ, ಮಕ್ಕಳಿಗೆ ಕನ್ನಡದ ಕಲಿಕೆಯ ಜೊತೆಗೆ ಇಂಗ್ಲೀಷ್ ಅನ್ನು ಸಹ ಭೋದನೆ ಮಾಡಬೇಕು. ಇದರಿಂದ ಮಕ್ಕಳಿಗೆ ಜ್ಞಾನ ವೃದ್ದಿಯಾಗುತ್ತದೆ. ಶಿಸ್ತು, ಸಂಯಮ, ಸಮಯ ಪರಿಪಾಲನೆಯನ್ನು ಮಕ್ಕಳಿಗೆ ಕಲಿಸಿ, ಇದು ಅವರ ಮುಂದಿನ ಜೀವನಕ್ಕೆ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆ ಗುರುಲಿಂಗಮ್ಮ ಪ್ರಸ್ತಾವಿಕವಾಗಿ ಮಾತನಾಡಿ, ನಮ್ಮ ಗ್ರಾಮಸ್ಥರ ಸಹಕಾರದಿಂದ ಉತ್ತಮವಾದ ಅಂಗನವಾಡಿಯನ್ನು ನಿರ್ಮಾಣ ಮಾಡಲು ಸಾಧ್ಯವಾಗಿದೆ. ಪೋಷಕರು ಸಹ ಸಹಕಾರ ನೀಡಿದ್ದು, ಈ ಹಿಂದೆ ಮಕ್ಕಳಿಗೆ ಸಮವಸ್ತ್ರ, ಕಲಿಕಗೆ ಅತ್ಯವಶ್ಯಕವಾದ ಪರಿಕರಗಳನ್ನು ನೀಡಲಾಗಿತ್ತು. ಈಗ ಸರ್ಕಾರದ ನೆರವಿನಿಂದ ಇನ್ನು ಉತ್ತಮವಾಗಿ ಕಾನ್ವೆಂಟ್ ನಿರ್ವಹಣೆ ಮಾಡಲು ಸಾಧ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಅಶ್ವಿನಿ, ಗ್ರಂಥಾಲಯ ಪಾಲಕರಾದ ಮಂಜುಳಾ, ಅಂಗನವಾಡಿ ಕಾರ್ಯಕರ್ತೆಯರಾದ ಗುರುಲಿಂಗಮ್ಮ, ಸೌಜನ್ಯ ಬಿ ಮಂಜುಳಾ, ಸಹಾಯಕಿ ಎಂ ಮಂಜುಳಾ ಹಾಗೂ ಪೊ?ಷಕರು, ಮಕ್ಕಳು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಹೊರ ರಾಜ್ಯದ ಕಾರ್ಮಿಕರಿಗೆ ಸ್ಕ್ರೀನಿಂಗ್ ಕಡ್ಡಾಯ

## ವೈದ್ಯಾಧಿಕಾರಿಗಳಿಗೆ ಸಿಇಓ ಕೆ. ಆರ್. ನಂದಿನಿ ಸೂಚನೆ



**ಮಂಡ್ಯ:** 2017 ರಿಂದ 2026 ರ ವರಗೆ ಮಂಡ್ಯ ಜಿಲ್ಲೆಯಲ್ಲಿ ಸ್ಥಳೀಯ ಪ್ರಕರಣಗಳು ವರದಿಯಾಗಿರುವುದಿಲ್ಲ ಹೊರ ರಾಜ್ಯಗಳಿಂದ ಕೈಗಾರಿಕ ಪ್ರದೇಶಗಳಲ್ಲಿ ಕೆಲಸ ಮಾಡಲು ವಲಸೆ ಬಂದ ಕಾರ್ಮಿಕರಿಂದ ಮಲೇರಿಯಾ ಪ್ರಕರಣಗಳು ಕಂಡು ಬಂದಿದ್ದು ಮಂಡ್ಯ ಜಿಲ್ಲೆಗೆ ಕೆಲಸ ನಿಮಿತ್ತ ಬರುವ ಕಾರ್ಮಿಕರನ್ನು ಕಡ್ಡಾಯವಾಗಿ ಸ್ಕ್ರೀನಿಂಗ್ (ರಕ್ತ ತಪಾಸಣೆ) ಮಾಡಲು ವೈದ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ. ಆರ್. ನಂದಿನಿ ರವರು ತಿಳಿಸಿದರು.

ಶನಿವಾರ ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಮಂಡ್ಯ ಇವರ ವಹಿಯಿಂದ ಮಲೇರಿಯಾ ವಿರೋಧಿ ಮಾಸಚಾರಣೆ ಜೂನ್ –2026 ಮಲೇರಿಯಾ ನಿಯಂತ್ರಣ ಕುರಿತು ಅಂತರ್ ಇಲಾಖಾ ಸಮನ್ವಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂಗಾರು ಮಳೆಯ ಸಮಯದಲ್ಲಿ ಡೆಂಗ್ಯೂ ಮತ್ತು ಮಲೇರಿಯಾ ನಂತಹ ಸೊಳ್ಳೆಗಳಿಂದ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಆರೋಗ್ಯ ಇಲಾಖೆಗೆ ನಿರ್ದೇಶನ ನೀಡಿದರು.

ಗ್ರಾಮೀಣ ಮತ್ತು ನಗರ ಭಾಗದ ಜನರಲ್ಲಿ ಮಲೇರಿಯಾ ಕುರಿತು ಜಾಗೃತಿ ಮೂಡಿಸಲು ಗ್ರಾಮ ಪಂಚಾಯತ್ ಮಟ್ಟದಲ್ಲಿ ವಿಶೇಷ ಆಂದೋಲನಗಳನ್ನು ಹಮ್ಮಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ ಬಿ.ಸಿ.ಎಂ. ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಉತ್ತಮ ಆರೋಗ್ಯ ದೃಷ್ಟಿಯಿಂದ ಸೊಳ್ಳೆ ನಿರೋಧಕ ಜಾಲಾರಿಗಳು ಹಾಗೂ ಸೊಳ್ಳೆ ಪರದೆಗಳನ್ನು ಅಳವಡಿಸುವಂತೆ ಸೂಚಿಸಿದರು.

ಕಾರ್ಖಾನೆ ಆವರಣದಲ್ಲಿರುವ ನೀರಿನ ತೊಟ್ಟಿಗಳು, ಚರಂಡಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು. ಲಾರ್ವಾಗಳನ್ನು ನಾಶಪಡಿಸಲು ಕೀಟನಾಶಕಗಳನ್ನು ಸಿಂಪಡಿಸಬೇಕು ಹಾಗೂ ಕೈಗಾರಿಕೆ ವಲಯಗಳಿಗೆ ವಲಸೆ ಬರುವ ಕಾರ್ಮಿಕರ ಬಗ್ಗೆ ಜಿಲ್ಲಾ ಮಟ್ಟದ ಆರೋಗ್ಯ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡುವುದರ ಮೂಲಕ ಆರೋಗ್ಯ ವ್ಯವಸ್ಥೆಯನ್ನು ಕಾಪಾಡುವುದು ಅತ್ಯಗತ್ಯ ಎಂದರು.

ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆ. ಎಸ್. ಆರ್. ಟಿ. ಸಿ.ಡಿಪೋ ಗಳಲ್ಲಿ ನಿರುಪಯುಕ್ತ ಟೈರುಗಳನ್ನು ಹಾಗೂ ಅನುಪಯುಕ್ತ ವಸ್ತುಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ಟೈರುಗಳಲ್ಲಿ ನೀರು ಶೇಖರಣೆಯಾಗದಂತೆ ಕ್ರಮ ವಹಿಸಬೇಕು ಎಂದು ಸಾರಿಗೆ ಅಧಿಕಾರಿಗಳಿಗೆ ತಿಳಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮನೆ ಮನೆಗೆ ತೆರಳುವ ಆಶಾ ಕಾರ್ಯಕರ್ತೆಯರು ಡೆಂಗ್ಯೂ ಮತ್ತು ಮಲೇರಿಯಾ ದಂತಹ ರೋಗಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಮೋಹನ್. ಕೆ,ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ. ಕಾಂತರಾಜು ಎನ್., ಇಲಾಖೆ ಅಧಿಕಾರಿ ಹರ್ಷ ರವರು ಉಪಸ್ಥಿತರಿದ್ದರು.

### ಎಸ್ ಎಸ್ ಎಲ್ಸಿವರೆಗೆ ಸಹಪಾಠಿಗಳು; ನಾಲ್ಕು ವರ್ಷದಿಂದ ಪ್ರೇಮಿಗಳು

# ಮಂತ್ರ ಮಾಂಗಲ್ಯ ಮದುವೆಯಾದ ಸುಬ್ರಮಣಿ, ಸೌಮ್ಯ



**ಮೈಸೂರು:** ಪ್ರೇಮಿಗಳಾದ ಸವಿತಾ ಸಮಾಜದ ಸುಬ್ರಮಣಿ ಜಿ. ಹಾಗೂ ಉಪ್ಪಾರ ಸಮಾಜದ ಸೌಮ್ಯ ಎಂ. ಅವರು ನಗರದಲ್ಲಿ ಶುಕ್ರವಾರ ಕುವೆಂಪು ಅವರ ಮಂತ್ರಮಾಂಗಲ್ಯದ ಮೂಲಕ ಮದುವೆಯಾದರು.

ಶ್ರೀರಂಗಪಟ್ಟಣ ತಾಲ್ಲೂಕಿನ ದರಸಗುಪ್ಪೆಯ ಸುಬ್ರಮಣಿ ಹಾಗೂ ಸೌಮ್ಯ ಒಂದನೇ ತರಗತಿಯಿಂದ ಎಸ್ ಎಸ್ ಎಲ್ ಸಿವರೆಗೆ ಸಹಪಾಠಿಗಳಾಗಿದ್ದರು. ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದ ಅವರು ನಗರದ ಜಾತ್ಯತೀತ ಒಲವಿನ ವೇದಿಕೆಯಾದ ಮಾನವ ಮಂಟಪ ಆಯೋಜಿಸಿದ್ದ ಸಮಾರಂಭದಲ್ಲಿ ಸರಳ ವಿವಾಹವಾದರು.

ಎಸ್‌ಎಸ್ ಎಲ್ ಸಿ ನಂತರ ನಗರದ ಬೋಗಾದಿಯಲ್ಲಿ ಕ್ಷೌರಿಕ ವೃತ್ತಿ ಕೈಗೊಂಡಿರುವ ಸುಬ್ರಮಣಿ ಅವರು ಪ್ರೊಫೆಷನಲ್ ಕೋರ್ಸ್9 ಇನ್ ಗ್ರೂಮಿಂಗ್ ಪಡೆದಿದ್ದಾರೆ.

ಸೌಮ್ಯ ಅವರು ಎಂ.ಕಾಂ ನಂತರ ಎಂಬಿಎ ಪದವಿ ಪಡೆದಿದ್ದಾರೆ.

ಅವರ ಮದುವೆಗೆ ದರಸಗುಪ್ಪೆ ಗ್ರಾಮದ ಆಪ್ತ ಬಂಧುಗಳು, ಸಹಪಾಠಿಗಳು ಹಾಜರಿದ್ದರು. ಅಲ್ಲದೆ ಸುಬ್ರಮಣಿ ತಾಯಿ ಶೋಭಾ ಹಾಗೂ ಸೌಮ್ಯ ಅವರ ಹೆತ್ತವರಾದ ವಸಂತಿ ಮತ್ತು ಚಾಲಕರಾದ ಮಹದೇವು

ಒಪ್ಪಿದ್ದಲ್ಲದೆ ಮದುವೆಗೂ ಸಾಕ್ಷಿಯಾದರು. ಸುಬ್ರಮಣಿ ತಂದೆ ಗಣೇಶ್ ನಿಧನರಾಗಿದ್ದಾರೆ.

ಮಾನವ ಮಂಟಪದ ಸಂಚಾಲಕರಾದ ಧನಂಜಯ್ ಎಲಿಯೂರು ಮಾತನಾಡಿ, ಕುವೆಂಪು ಅವರು ತಮ್ಮ ಪುತ್ರ ಪೂರ್ಣಚಂದ್ರ ತೇಜಸ್ವಿ ಹಾಗೂ ರಾಜೇಶ್ವರಿ ಅವರ ಮದುವೆಯನ್ನು ಮಂತ್ರ ಮಾಂಗಲ್ಯ ಮೂಲಕ ನೆರವೇರಿಸಿದರು. ಮದುವೆ ದಿನವೇ ತಮ್ಮ ಆಪ್ತರಿಗೆ ಬಿಡುವಾದಾಗ ಬಂದು ಆಶೀರ್ವದಿಸಿರೆಂದು ಪತ್ರ ಬರೆದರು. ಈಮೂಲಕ ಸರಳ ಮದುವೆಗೆ ನಾಂದಿಯಾದರು ಎಂದು ಹೇಳಿದರು.

ಮಾನವ ಮಂಟಪದ ಇನ್ನೊಬ್ಬ ಸಂಚಾಲಕರಾದ ಪ್ರೊ.ಕಾಳಚನ್ನೇಗೌಡ ಅವರು ಮಂತ್ರ ಮಾಂಗಲ್ಯದ ಪ್ರಮಾಣ ವಚನ ಬೋಧಿಸಿದರು. ನಂತರ ಅವರು ಮಾತನಾಡಿ, ನಮ್ಮ ದೇಶದಲ್ಲಿ 2600ಕ್ಕೂ ಅಧಿಕ ಮುಖ್ಯ ಜಾತಿಗಳಿವೆ ಜೊತೆಗೆ ಅಸಂಖ್ಯ ಉಪಜಾತಿಗಳಿವೆ. ಆದರೆ ಸ್ವಜಾತಿಯಲ್ಲಿ ನಡೆದ ಅನೇಕ ಮದುವೆಗಳು ವಿಚ್ಛೇದನದಲ್ಲಿ ಕೊನೆಗೊಳ್ಳುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ಟಿವಿ ಧಾರಾವಾಹಿಗಳನ್ನು ನೋಡಿ ಪ್ರಭಾವಿತರಾದ ಗ್ರಾಮೀಣರೂ ಅರಿಸಿನ ಶಾಸ್ತ್ರ, ಮೆಹಂದಿಶಾಸ್ತ್ರವೆಂದು ಸಾಲ ಮಾಡಿಯಾದರೂ ಅದ್ಧೂರಿಯಾಗಿ ಮದುವೆ ಮಾಡುತ್ತಿದ್ದಾರೆ. ಶಾಸ್ತ್ರಕ್ಕಿಂತ ಚೆನ್ನಾಗಿ ಬದುಕುವುದು ಮುಖ್ಯ. ಆದರೆ ಸರಳವಾದ ಮದುವೆಗಳು ಕಳಪೆಯಲ್ಲ. ಹೀಗಾಗಿ ಸರಳ ಮದುವೆಗಳಿಗೆ ಯುವಕರು ಮುಂದಾಗಬೇಕು ಎಂದು ಕಾಳಚನ್ನೇಗೌಡ ಸಲಹೆ ನೀಡಿದರು.

ಮಾನವ ಮಂಟಪದ ಮತ್ತೊಬ್ಬ ಸಂಚಾಲಕರಾದ ಉಗ್ರನರಸಿಂಹೇಗೌಡ ಅವರು ವಿವಾಹ ಸಂಹಿತೆಯನ್ನು ಬೋಧಿಸಿದರು. ನಂತರ ಅವರು ಮಾತನಾಡಿ, ಅದ್ಧೂರಿ ಮದುವೆಗಳಲ್ಲಿ ವ್ಯಾಪಾರ, ವಹಿವಾಟು ಹೆಚ್ಚಿರುತ್ತದೆ. ಅಲ್ಲದೆ ಪ್ರತಿಷ್ಠೆಗಾಗಿ ಅದ್ದೂರಿ ಮದುವೆಗಳಾಗುತ್ತಿವೆ. ಆದರೆ ಸರಳವಾದ ಮದುವೆಗಳು ಆದರ್ಶ ಹಾಗೂ ಮೌಲ್ಯಯುತವಾದವು ಎಂದು ತಿಳಿಸಿದರು.

ಈಚೆಗೆ ಪ್ರಿ ವೆಡ್ಡಿಂಗ್ ಹೆಚ್ಚುತ್ತಿವೆ. ಮದುವೆ ಮೂಲಕ ಸಂತೆ ಮಾಡಬೇಕಿಲ್ಲ. ಹಾಗೆಯೇ ಶಕ್ತಿ, ಸಾಮರ್ಥ್ಯ ಮೀರಿ ಸಾಲ ಮಾಡಿ ಅದ್ದೂರಿ ಮದುವೆ ಮಾಡುವ ಅಗತ್ಯವಿಲ್ಲ. ಇದಕ್ಕಾಗಿ ಜಾತಿ ಹೋಗಲಾಡಿಸಲು ಅಂತರ್ಜಾತಿ ಮದುವೆಗಳು ಹೆಚ್ಚಬೇಕು ಎಂದು ಹೇಳಿದರು.

ಮದುವೆಯಾದ ಸುಬ್ರಮಣಿ ಮಾತನಾಡಿ, ಆಸ್ತಿಅಂತಸ್ತು ನೋಡಿ ಮದುವೆಯಾಗುವ ಕಾಲವಿದು. ಮದುವೆ ಶ್ರೀಮಂತವಾಗಬಾರದು. ನಮ್ಮ ಬದುಕು ಶ್ರೀಮಂತವಾಗಬೇಕು ಎಂದರು. ಅವರ ಪತ್ನಿ ಸೌಮ್ಯ ಮಾತನಾಡಿ, ನಾವಿಬ್ಬರೂ ಪರಸ್ಪರ ಅರ್ಥ ಮಾಡಿಕೊಂಡಿದ್ದು ಅರ್ಥಪೂರ್ಣವಾಗಿ ಬದುಕುತ್ತೇವೆ ಎಂದರು.

ರಂಗಕರ್ಮಿ ದೀಪಕ್ ಮೈಸೂರು, ಸುಬ್ರಮಣಿ ಸಹಪಾಠಿ ಮಂಜುನಾಥ್ ಮಾತನಾಡಿದರು.

# ಶ್ರೀರಂಗಪಟ್ಟಣದ ನೀರು ಶುದ್ಧೀಕರಣ ಘಟಕಕ್ಕೆ ಡಿಸಿ ದಿಡೀರ್ ಭೇಟಿ

## ಕೊಳಚೆ ನೀರಿನ ನಿರ್ವಹಣೆಯ ಪರಿಶೀಲನೆ



**ಮಂಡ್ಯ:** ಶ್ರೀರಂಗಪಟ್ಟಣದ *ನೀರು ಶುದ್ಧೀಕರಣ ಘಟಕಕ್ಕೆ ಜಿಲ್ಲಾಧಿಕಾರಿ ಕುಮಾರ ಶನಿವಾರ ದಿಡೀರ್ ಭೇಟಿ ನೀಡಿ, ಘಟಕದ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿದರು. ಈ ವೇಳೆ ಘಟಕದ ಓವರ್‌ಹೆಡ್ ಟ್ಯಾಂಕ್ ವೀಕ್ಷಿಸಿ, ಶುದ್ಧ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಲೋಕಾಯುಕ್ತದಲ್ಲಿ ದಾಖಲಾಗಿರುವ ಸ್ವಯಂ ಪ್ರೇರಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ನದಿಗೆ ಕೊಳಚೆ ನೀರು ಹರಿಯದಂತೆ ಅಳವಡಿಸಲಾಗಿರುವ ಪೈಪ್‌ಲೈನ್ ವ್ಯವಸ್ಥೆಯನ್ನು ಪರಿಶೀಲಿಸಿದರು.

ಯಾವುದೇ ಕಾರಣಕ್ಕೂ ಸಂಸ್ಕರಿಸದ ಕೊಳಚೆ ನೀರು ನದಿಗೆ ಸೇರ್ಪಡೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ನಂತರ ಕೊಳಚೆ ನೀರು ಶುದ್ಧೀಕರಣ ಘಟಕ ಅನ್ನು ಪರಿಶೀಲಿಸಿ, ಘಟಕವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುದನ್ನು ಪರಿಶೀಲಿಸಿದರು. ಕೊಳಚೆ ನೀರಿನ ಸಂಸ್ಕರಣೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳಿಗೆ ಅನುಗುಣವಾಗಿ ನಡೆಯಬೇಕು ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ, ಮುಖ್ಯಧಿಕಾರಿಗಳು ಶ್ರೀರಂಗಪಟ್ಟಣ ಪುರಸಭೆ, ಪರಿಸರ ಅಧಿಕಾರಿ ಹಾಗೂ ಇಲಾಖೆಗಳ ಸಿಬ್ಬಂದಿಗಳು ಉಪಸ್ಥಿತರಿದ್ದರು.

# "ಎಬಿಡಿ:ಸಂಘರ್ಷ ಗೆದ್ದ ಮಿಸ್ಟರ್ 360"



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 49

ಕ್ರಿಕೆಟ್ ಲೋಕದ ಅದ್ಭುತ ಮಾಂತ್ರಿಕ ಎಬಿ ಡಿವಿಲಿಯರ್ಸ್ ಅವರ ಯಶಸ್ಸಿನ ಹೊಳಪಿನ ಹಿಂದೆ ಕಠಿಣ ಪರಿಶ್ರಮ ಮತ್ತು ನೋವಿನ ಕಥೆಯಿದೆ.ಯುವಜನತೆಗೆ ಮಾದರಿಯಾದ ಅವರ ಜೀವನದ ಪ್ರಮುಖ ಹಂತಗಳು ಹಲವು.

ನಮಗೆ ಮೈದಾನದಲ್ಲಿ ಅವರ ಬ್ಯಾಟಿಂಗ್ ಸಿಡಿಲಬ್ಬರದಂತೆ ಕಂಡರೆ, ಅದರ ಹಿಂದೆ ಅವರು ಅನುಭವಿಸಿದ ದೈಹಿಕ ನೋವು ಅಪಾರ.

ವೃತ್ತಿಜೀವನದ ಬಹುಕಾಲ ಅವರು ತೀವ್ರವಾದ ಬೆನ್ನುನೋವಿನಿಂದ ಬಳಲುತ್ತಿದ್ದರು.ಎಷ್ಟೋ ಬಾರಿ ವೈದ್ಯರು ವಿಶ್ರಾಂತಿ ಸೂಚಿಸಿದರೂ, ತಂಡದ ಗೆಲುವಿಗಾಗಿ ನೋವನ್ನು ನುಂಗಿ ಬ್ಯಾಟ್ ಬೀಸಿದರು.ಇದು ಅವರ ಅಪ್ರತಿಮ ವೃತ್ತಿಪರತೆಗೆ ಸಾಕ್ಷಿ.

ವಿಶ್ವಕಪ್‌ನಂತಹ ನಿರ್ಣಾಯಕ ಪಂದ್ಯಗಳಲ್ಲಿ ಸೋತಾಗ ಅವರು ಮಾನಸಿಕವಾಗಿ ಕುಗ್ಗಿದ್ದರು.



ಆದರೆ ಆ ಕಣ್ಣೀರು ಅವರನ್ನು ಸೋಲಿಸಲಿಲ್ಲ; ಬದಲಿಗೆ ಮತ್ತಷ್ಟು ಬಲಪಡಿಸಿತು. ಸಣ್ಣ ಸೋಲಿಗೇ ಧೃತಿಗೆಡುವ ಇಂದಿನ ಯುವಕರಿಗೆ, ವೈಫಲ್ಯಗಳನ್ನು ಜೀರ್ಣಿಸಿಕೊಂಡು ಪುಟಿದೇಳುವ ಎಬಿಡಿಯವರ ಗುಣ ದೊಡ್ಡ ಪ್ರೇರಣೆ.

**ಅವರು ಕೇವಲ ಕ್ರಿಕೆಟಿಗರಲ್ಲ;** ಟೆನ್ನಿಸ್,ಹಾಕಿ ಮತ್ತು ರಗ್ಬಿಯಲ್ಲೂ ಮಿಂಚಿದ್ದರು.ಪ್ರತಿ ಕ್ರೀಡೆಯಿಂದ ಅವರು ಕಲಿತ ಶಿಸ್ತು ಮತ್ತು ಸಮಯಪ್ರಜ್ಞೆ ಅವರನ್ನು ಒಬ್ಬ ಪರಿಪೂರ್ಣ ಆಟಗಾರನನ್ನಾಗಿ ರೂಪಿಸಿತು.ಪರಿಶ್ರಮಕ್ಕೆ ಯಾವುದೂ ಅಸಾಧ್ಯವಲ್ಲ ಎಂಬುದನ್ನು ಅವರು ನಿರೂಪಿಸಿದರು.

ಎಷ್ಟೇ ದಾಖಲೆಗಳನ್ನು ಬರೆದರೂ ಡಿವಿಲಿಯರ್ಸ್ ಸದಾ ವಿನಮ್ರರಾಗಿದ್ದರು.ಆಟಕ್ಕಿಂತ ಯಾರೂ ದೊಡ್ಡವರಲ್ಲ ಎಂಬ ಅವರ ನಡೆ ಮತ್ತು ನುಡಿ ಯುವಜನಾಂಗಕ್ಕೆ ಘನತೆಯಿಂದ ಬದುಕುವ ಪಾಠ ಕಲಿಸುತ್ತದೆ.

ಸವಾಲುಗಳು ನಮ್ಮನ್ನು ಮುರಿಯಲು ಬರುವುದಿಲ್ಲ, ನಮ್ಮೊಳಗಿನ ಶಕ್ತಿಯನ್ನು ಎಚ್ಚರಿಸಲು ಬರುತ್ತವೆ ಎಂಬುದಕ್ಕೆ ಈ ಛಲದ ಹರಿಕಾರನೇ ಅತ್ಯುತ್ತಮ ಉದಾಹರಣೆ.

# ಅಂತರರಾಷ್ಟ್ರೀಯ ಯೋಗ ದಿನ: ಗುರುಗಳ ಸ್ಮರಣೆ

ಯೋಗೇನ ಚಿತ್ತಸ್ಯ ಪದೇನ ವಾಚಾಂ । ಮಲಂ ಶರೀರಸ್ಯ ಚ ವೈದ್ಯಕೇನ ॥
ಯೋಪಾಕರೋತ್ತಂ ಪ್ರವರಂ ಮುನೀನಾಂ । ಪತಂಜಲಿಂ ಪ್ರಾಂಜಲಿರಾನತೋಸ್ಮಿ ॥



| ರೂಪ ಮಂಜುನಾಥ ಹೊಳೆನರಸೀಪುರ

**ಸಾರಾಂಶ:** ಯಾರು ಯೋಗದ ಮೂಲಕ ಮನಸ್ಸಿನ ಕಲ್ಮಶಗಳನ್ನು, ವ್ಯಾಕರಣದ ಮೂಲಕ ಭಾಷೆಯ ದೋಷಗಳನ್ನು ಮತ್ತು ಆಯುರ್ವೇದದ ಮೂಲಕ ಶರೀರದ ಕಾಯಿಲೆಗಳನ್ನು ದೂರ ಮಾಡಿದರೋ, ಅಂತಹ ಮುನಿಶ್ರೇಷ್ಠರಾದ ಪತಂಜಲಿ ಮಹಾ ಮುನಿಗಳಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ಈ ಪವಿತ್ರ ಮಂತ್ರದೊಂದಿಗೆ ಪ್ರತಿಯೊಂದು ಯೋಗಾಭ್ಯಾಸವೂ ಆರಂಭವಾಗುತ್ತದೆ. ಜೂನ್ 21ರಂದು ಜಗತ್ತಿನಾದ್ಯಂತ ಆಚರಿಸಲಾಗುವ 'ಅಂತರರಾಷ್ಟ್ರೀಯ ಯೋಗ ದಿನ'ವು ಕೇವಲ ಒಂದು ದಿನದ ಆಚರಣೆಯಲ್ಲ; ಅದು ನಮ್ಮ ಪ್ರಾಚೀನ ಭಾರತೀಯ ಪರಂಪರೆ ಮತ್ತು ಆರೋಗ್ಯಕರ ಜೀವನಶೈಲಿಯ ಜಾಗತಿಕ ಹಬ್ಬವಾಗಿದೆ.

ಯೋಗದ ಜ್ಞಾನವನ್ನು ಮೊದಲ ಬಾರಿಗೆ ವ್ಯವಸ್ಥಿತಗೊಳಿಸಿ ಜಗತ್ತಿಗೆ ಸೂತ್ರಗಳ ರೂಪದಲ್ಲಿ ನೀಡಿದವರು ಪತಂಜಲಿ ಮುನಿಗಳು. ಅವರು ರಚಿಸಿದ 'ಯೋಗಸೂತ್ರ'ಗಳು ಇಂದಿಗೂ ಯೋಗ ಮಾರ್ಗಕ್ಕೆ ದಾರಿದೀಪವಾಗಿವೆ. ದೇಹ, ಮನಸ್ಸು ಮತ್ತು ಆತ್ಮವನ್ನು ಹೇಗೆ ಒಂದಾಗಿಸಬೇಕು ಎಂಬುದನ್ನು ಅತಿ ಸೂಕ್ಷ್ಮವಾಗಿ ವಿವರಿಸಿದ ಆದಿಗುರು ಪತಂಜಲಿ ಮುನಿಗಳನ್ನು ಈ ಶುಭ ದಿನದಂದು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ.

ಇಂದಿನ ಆಧುನಿಕ ಹಾಗೂ ಒತ್ತಡದ ಜಗತ್ತಿನಲ್ಲಿ ಮನುಷ್ಯ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಯೋಗವು ಜಾಗತಿಕ ಮಟ್ಟದಲ್ಲಿ ಮನುಕುಲಕ್ಕೆ ಸಿಕ್ಕ ದೊಡ್ಡ ಸಂಜೀವಿನಿಯಾಗಿದೆ. ದೇಹದ ಆರೋಗ್ಯ, ಮಾನಸಿಕ ಶಾಂತಿ ಮತ್ತು ಭಾವನಾತ್ಮಕ ಸಮತೋಲನವನ್ನು ಕಾಪಾಡಿಕೊಳ್ಳಲು ಯೋಗ ಎಷ್ಟು ಅವಶ್ಯಕ ಎಂಬುದನ್ನು ನೆನಪಿಸಲು ಈ ಅಂತರರಾಷ್ಟ್ರೀಯ ಯೋಗ ದಿನ ಮಹತ್ವದ ಪಾತ್ರ ವಹಿಸುತ್ತದೆ.

ಆರೋಗ್ಯದ ಪ್ರಮುಖ ಆಯಾಮಗಳನ್ನು ಕೆಳಕಂಡಂತೆ ವಿಂಗಡಿಸಬಹುದು.

**ದೈಹಿಕ ಆರೋಗ್ಯ:** ದೇಹದ ಎಲ್ಲಾ ಅಂಗಾಂಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದು, ಉತ್ತಮ ರೋಗನಿರೋಧಕ ಶಕ್ತಿ ಮತ್ತು ಯಾವುದೇ ದೀರ್ಘಕಾಲೀನ ಕಾಯಿಲೆಗಳಿಲ್ಲದಿರುವಿಕೆ.

**ಮಾನಸಿಕ ಆರೋಗ್ಯ:** ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯ, ಭಾವನಾತ್ಮಕ ಸ್ಥಿರತೆ ಮತ್ತು ಸಕಾರಾತ್ಮಕ ಆಲೋಚನೆಗಳನ್ನು ಹೊಂದುವುದು.

**ಸಾಮಾಜಿಕ ಆರೋಗ್ಯ:** ಇತರರೊಂದಿಗೆ ಉತ್ತಮ ಸಂಬಂಧ ಹೊಂದುವುದು ಮತ್ತು ಸಮಾಜದಲ್ಲಿ ಆರೋಗ್ಯಕರವಾಗಿ ಹೊಂದಿಕೊಂಡು ಬದುಕುವುದು.



**ಆರೋಗ್ಯದ ಮಹತ್ವ ???ಉತ್ಪಾದಕತೆ ಹೆಚ್ಚಳ:** ಉತ್ತಮ ಆರೋಗ್ಯವುಳ್ಳ ವ್ಯಕ್ತಿಗಳು ಯಾವುದೇ ಕೆಲಸದಲ್ಲಿ ಹೆಚ್ಚು ಕ್ರಿಯಾಶೀಲರಾಗಿ, ಉತ್ಸಾಹದಿಂದ ಭಾಗವಹಿಸಿ ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

ದೀರ್ಘಾಯುಷ್ಯ ಮತ್ತು ಆರ್ಥಿಕ ಬೆಳವಣಿಗೆ: ಆರೋಗ್ಯವಂತ ಜನಸಂಖ್ಯೆಯು ಆರ್ಥಿಕ ಪ್ರಗತಿಗೆ ಗಮನಾರ್ಹವಾಗಿ ಕೊಡುಗೆ ನೀಡುತ್ತದೆ ಮತ್ತು ವೈದ್ಯಕೀಯ ವೆಚ್ಚಗಳನ್ನು ಕಡಿಮೆ ಮಾಡುತ್ತದೆ.

ಸಂತೋಷ ಮತ್ತು ನೆಮ್ಮದಿ: ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿರುವಾಗ ಜೀವನದ ಪ್ರತಿಯೊಂದು ಕ್ಷಣವನ್ನು ಆನಂದಿಸಲು ಸಾಧ್ಯವಾಗುತ್ತದೆ.

ಆರೋಗ್ಯವನ್ನು ಕಾಪಾಡಿಕೊಳ್ಳುವ ಸರಳ ಮಾರ್ಗಗಳು

ಸಮತೋಲಿತ ಆಹಾರ: ಹಣ್ಣುಗಳು, ತರಕಾರಿಗಳು, ಮತ್ತು ಪೋಷಕಾಂಶಭರಿತ ಆಹಾರ ಸೇವನೆ.

**ದೈಹಿಕ ಚಟುವಟಿಕೆ:** ಪ್ರತಿನಿತ್ಯ ವ್ಯಾಯಾಮ ಅಥವಾ ಯೋಗ ಮಾಡುವುದು.


**ಉತ್ತಮ ನಿದ್ರೆ:** ಕನಿಷ್ಠ 7–8 ಗಂಟೆಗಳ ಗಾಢ ನಿದ್ರೆ.

ಪ್ರತಿದಿನ ಮುಂಜಾನೆ ಬೆಳಗ್ಗೆ 5:15, ಯಾರು ಬರಲೀ ಬಿಡಲಿ,ಹೊಳೆನರಸೀಪುರದ ಪುರಸಭೆಯ ಗ್ರಂಥಾಲಯದ ಬಳಿಯೇ ಇರುವ ಪತಂಜಲಿ ಯೋಗ ಕೇಂದ್ರದಲ್ಲಿ ಮೇಲ್ಕಂಡ ಪ್ರಾರ್ಥನೆಯೊಂದಿಗೆ ಯೋಗ ತರಗತಿಗಳು ಆರಂಭವಾಗುತ್ತದೆ. ವರ್ಷಕ್ಕೆ ಅಬ್ಬಬ್ಬಾ ಅಂದರೆ ಎರಡೋ ಮೂರೋ ರಜೆಗಳು ಬಿಟ್ಟರೆ, ಯಾವ ಹಬ್ಬ ಹರಿದಿನಗಳು, ಸರಕಾರಿ ರಜೆಗಳು, ಯಾವುದೇ ರಜೆಗಳಿದ್ದರು ಯೋಗಕೇಂದ್ರದ ತರಗತಿಗಳು ಮಾತ್ರ ನಿಲ್ಲುವುದಿಲ್ಲ.ಸುಮಾರು ಒಂದೂಕಾಲು ಒಂದೂವರೆ ಗಂಟೆಗಳ ಕಾಲ ತರಗತಿ ನಡೆಯುತ್ತದೆ.ವಾರಕ್ಕೊಮ್ಮೆ ಕೇಂದ್ರದ ಧೂಳು ತೆಗೆದು, ಕಸ ಗುಡಿಸಿ, ಸಾರಿಸಿ ರಂಗೋಲೆ ಹಾಕುವುದು. ಇಲ್ಲೂ ಕೂಡಾ ಗುರುಗಳ ಪದವಿಯಲ್ಲಿದ್ದೇವೆ ಎನ್ನುವ ಯಾವ ಭಾವನೆಯೂ ಇಲ್ಲದೆ, ಎಲ್ಲ ಕೆಲಸಕ್ಕೂ ಕೈಹಾಕುವ ಸರಳಾತಿಸರಳ ಸಜ್ಜನಿಕೆಯ ಮನೋಭಾವ ನಮ್ಮ ಕೇಂದ್ರದ ಗುರುಗಳಿಗಿರುವುದು ಒಂದು ಹೆಗ್ಗಳಿಕೆಯೇ ಸರಿ.

ಪತಂಜಲಿ ಯೋಗ ಕೇಂದ್ರದಲ್ಲಿ ಕೇವಲ ಯೋಗಾಭ್ಯಾಸವೊಂದೇ ನಡೆಯುವುದಿಲ್ಲ. ತರಗತಿಗಳ ಮಧ್ಯೆ ಆ ದಿನದ ಪಂಚಾಂಗ ಹೇಳುವುದರ ಜೊತೆಗೆ ಕೆಲ ನಿಮಿಷಗಳ ಕಾಲ ಸತ್ಸಂಗ, ನೀತಿ ಬೋಧನೆ,ಸಾಧಕರು ಜೀವಿಸಿದ ಮಾರ್ಗದ ಬಗ್ಗೆ ತಿಳಿಸಲಾಗುತ್ತದೆ. ಕೇಂದ್ರದಲ್ಲಿ ಇರುವ ಬಹಳ ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಪ್ರತಿಭಾನ್ವಿತರೇ! ಗುರುಗಳಾದ ಗಣೇಶ್ ಸರ್, ಕರುಣಾಕರ್ ಸರ್, ಹಾಲಿ ಅಧ್ಯಕ್ಷರಾದ ಲೋಕೇಶ್ ಸರ್, ದಿನೇಶ್ ಸರ್,ಕಾರ್ಯದರ್ಶಿಗಳಾದ ವಾಸು ಸರ್, ಕೃಷ್ಣಮೂರ್ತಿ ಸರ್, ನರಸಿಂಹ ಸರ್, ಪ್ರೇಮಾ ಮೇಡಮ್ ನಮ್ಮ ಕೇಂದ್ರದ ಅಷ್ಟಆಧಾರ ಕಂಬಗಳಿದ್ದಂತೆ! ಎಲ್ಲರೂ ಎಲ್ಲ ರೀತಿಯಿಂದಲೂ ಗುರುಗಳಿಗೆ ಸಮಾನವಾಗಿದ್ದು ನಮಗೆಲ್ಲಾ ಆರೋಗ್ಯಪೂರ್ಣ ಜೀವನ ನಡೆಸಲು ಮಾರ್ಗದರ್ಶಕರಾಗಿದ್ದಾರೆ.ವಿವಿಧ ರೀತಿಯ ನಡಿಗೆಗಳಲ್ಲದೆ,ಲಾಫಿಂಗ್ ಯೋಗ,ಪ್ರಾಣಾಯಾಮ,ಹಾಗೂ ಯೋಗಾಸನಗಳಿಗೆ ಸಂಬಂಧಪಟ್ಟ ಹೊಸ ರೀತಿಯ ಪ್ರಯೋಗಗಳನ್ನು ತರಗತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಸರ್ವರಿಗೂ ಅಂತರರಾಷ್ಟ್ರೀಯ ಯೋಗ ದಿನ ಶುಭಾಶಯಗಳು!

ಇಂದಿನ ಕಾಲದಲ್ಲಿ ಶಿಕ್ಷಣ, ಸಂಸ್ಕೃತಿ ಎಲ್ಲವೂ ವ್ಯಾಪಾರವಾಗುತ್ತಿವೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಯೋಗದ ಹೆಸರಿನಲ್ಲಿ 'ಆನ್‌ಲೈನ್ ಕ್ಲಾಸುಗಳು', 'ಪ್ಯಾಕೇಜುಗಳು' ಎಂದು ಕೋಟಿ ಕೋಟಿ ಹಣ ಎಣಿಸುವವರ ನಡುವೆ, ಯಾವುದೇ ಫಲಾಪೇಕ್ಷೆ ಇಲ್ಲದೆ ಸೇವೆ ಮಾಡುವವರನ್ನು ನೋಡುವುದೇ ಅಪರೂಪವಾಗಿದೆ. ಇಂತಹ ಕಮರ್ಷಿಯಲ್ ಜಗತ್ತಿನಲ್ಲಿ, ಕೇವಲ ಸೇವಾಮನೋಭಾವದಿಂದ ಯೋಗದ ಜ್ಞಾನವನ್ನು ಧಾರೆ ಎರೆಯುತ್ತಿರುವ ಕರುಣಾಕರ್ ಜೀ ಮತ್ತು ಗಣೇಶ್ ಸರ್ ಅವರಂತಹ ಗುರುಗಳು ನಮಗೆ ಸಿಕ್ಕಿರುವುದು ನಮ್ಮ ಪೂರ್ವಜನ್ಮದ ಪುಣ್ಯ. ಇವರು ಕೇವಲ ಆಸನಗಳನ್ನು ಕಲಿಸುತ್ತಿಲ್ಲ, ಬದಲಿಗೆ ತಮ್ಮ ಬದುಕಿನ ಮೂಲಕವೇ ನಮಗೆ ಭಾರತೀಯ ಸಂಸ್ಕೃತಿಯ ಪವಿತ್ರವಾದ 'ಗುರು–ಶಿಷ್ಯ ಪರಂಪರೆ'ಯ ನಿಜವಾದ ಅರ್ಥವನ್ನು ಉಣಬಡಿಸುತ್ತಿದ್ದಾರೆ. ಡಿಜಿಟಲ್ ವ್ಯಾಪಾರೀಕರಣದ ನಡುವೆ ನಿಸ್ವಾರ್ಥತೆಯ ದೀಪಗಳು ನಮ್ಮ ಕೇಂದ್ರದಲ್ಲಿ ಪ್ರಜ್ವಲಿಸುತ್ತಿವೆ.



ಈ ವಿಶೇಷ ದಿನದಂದು ನನ್ನ ಪೂಜ್ಯ ಯೋಗ ಗುರುಗಳ ಪರಿಚಯ ನಿಮಗೆ ಮಾಡಿಕೊಡುವ ಸುಯೋಗ ನನ್ನದು.

ನನ್ನ ಯೋಗ ಪಯಣದಲ್ಲಿ ಸತ್ಪಥವನ್ನು ತೋರಿಸಿದ ಇಬ್ಬರು ಮಹಾನ್ ಚೇತನಗಳ ಪರಿಚಯ ಇಲ್ಲಿದೆ:

**ಕರುಣಾಕರ್ ಸರ್:** ಇವತ್ತಿಗೂ ಹದಿನಾಲ್ಕು ವಯಸ್ಸಿನ ಹುಡುಗನ ಮೈಕಟ್ಟನ್ನು ಇಟ್ಟುಕೊಂಡಿರುವ ಇವರಿಗೆ ಈಗ ಸುಮಾರು 72 ವರ್ಷ ವಯಸ್ಸು. ಆದರೆ ಯೋಗದ ವಿಷಯಕ್ಕೆ ಬಂದರೆ ಇಂದಿಗೂ ಇವರಲ್ಲಿ ಯುವಕರನ್ನು ಮೀರಿಸುವ ಉತ್ಸಾಹವಿದೆ. ಅತ್ಯಂತ ಸರಳ, ನಾಚಿಕೆ ಸ್ವಭಾವದ ಹಾಗೂ ಮಗುವಿನಂತಹ ನಿಷ್ಕಲ್ಮಶ ಮನಸ್ಸಿನ ಇವರು, ಸದಾ "ನನಗೇನೂ ತಿಳಿದಿಲ್ಲ, ತಿಳಿದಿಲ್ಲ" ಎನ್ನುತ್ತಲೇ ನಮಗೆ ಅದ್ಭುತವಾಗಿ ಯೋಗಾಭ್ಯಾಸವನ್ನು ಮಾಡಿಸುತ್ತಾರೆ. ಇವರ ಈ ನಮ್ರತೆ ನಮ್ಮ ಅಹಂಕಾರವನ್ನು ಕರಗಿಸಿಬಿಡುತ್ತದೆ.ಇವರ ಸಮಯಪ್ರಜ್ಞೆ ನಮಗೆಲ್ಲರಿಗೂ ಪಾಠ!

**ಶ್ರೀ ಗಣೇಶ್ ಸರ್:** ಗಣೇಶ್ ಸರ್ ಅವರು ಸುಮಾರು ಮೂರು ದಶಕಗಳಿಂದ (30 ವರ್ಷಗಳು) ನಿಸ್ವಾರ್ಥವಾಗಿ ಯೋಗ ತರಬೇತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರ ಜೀವನವೇ ನಮಗೆಲ್ಲ ದೊಡ್ಡ ಪ್ರೇರಣೆ! ಇತ್ತೀಚೆಗೆ ಅವರ ಆರೋಗ್ಯದಲ್ಲಿ ಏರುಪೇರಾದರೂ ಸಹ, ಅವರು ಕಿಂಚಿತ್ತೂ ಧೃತಿಕೆಡದೆ ಇವತ್ತಿಗೂ ಯೋಗ ತರಗತಿಗಳನ್ನು ಮುನ್ನಡೆಸುತ್ತಿದ್ದಾರೆ. ಆರೋಗ್ಯದ ಏರುಪೇರಿಗಿಂತ ಯೋಗ ಸೇವೆಯೇ ದೊಡ್ಡದು ಎಂದು ಭಾವಿಸಿರುವ ಇವರ ಬದ್ಧತೆ ನಮಗೆಲ್ಲ ಮಾದರಿಯಾಗಿದೆ.ಯೋಗದ ವಿಷಯವಾಗಿ ಯಾವ ಹೊಸತು ಕಲಿತರೂ ತರಗತಿಯಲ್ಲಿ ಅಳವಡಿಸಿಕೊಳ್ಳುತ್ತಾ, ನಮಗೂ ಅದರ ಅರಿವು ಮೂಡಿಸುವುದು ಇವರಿಗಿರುವ ವಿಶೇಷ ಗುಣ!

ಒಂದೆಡೆ ಕರುಣಾಕರ್ ಅವರ ಮಗುವಿನಂತಹ ಸರಳತೆ ನಮಗೆ ಯೋಗದಲ್ಲಿ 'ನಮ್ರತೆ'ಯನ್ನು ಕಲಿಸಿದರೆ, ಇನ್ನೊಂದೆಡೆ ಗಣೇಶ್ ಸರ್ ಅವರ ಧೃತಿಕೆಡದ ಮನೋಭಾವ ನಮಗೆ ಕಷ್ಟದ ಪರಿಸ್ಥಿತಿಯಲ್ಲೂ ಹೇಗೆ 'ಸ್ಥಿತಪ್ರಜ್ಞರಾಗಿ' ಇರಬೇಕು ಎಂಬುದನ್ನು ಕಲಿಸಿಕೊಡುತ್ತದೆ. ಒಬ್ಬರಿಂದ ನಮ್ರತೆ, ಮತ್ತೊಬ್ಬರಿಂದ ದೃಢತೆ ? ಇವೆರಡರ ಸಂಗಮವೇ ನನ್ನ ಯೋಗ ಸಾಧನೆ.ಈ ಯೋಗ ತರಗತಿಗಳಿಂದ ಕೇವಲ ದೈಹಿಕ, ಮಾನಸಿಕ ಆರೋಗ್ಯವನ್ನು ಪಡೆದುಕೊಳ್ಳುವುದಷ್ಟೇ ಅಲ್ಲದೆ ಅವರಿಗಿರುವ ಉದಾತ್ತ ಗುಣಗಳನ್ನು ಧಾರಣೆ ಮಾಡಿಕೊಂಡು ಉತ್ತಮರಾಗುವ ಸದಾವಕಾಶ ದೊರೆತೆ ಅದಕ್ಕಿಂತ ಭಾಗ್ಯ ಇನ್ನೇನಿದೇ?

ಇತ್ತೀಚಿನ ದಿನಗಳಲ್ಲಿ ಯುವಕರು ಕೇವಲ ಬಾಹ್ಯ ಸೌಂದರ್ಯಕ್ಕಾಗಿ, ಸ್ನಾಯುಗಳನ್ನು ಬೆಳೆಸಲು ಜಿಮ್ (Gym) ಅಥವಾ ಇತರ ಕಸರತ್ತುಗಳ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಆದರೆ ಯೋಗವು ಕೇವಲ ಬಾಹ್ಯ ಸ್ನಾಯುಗಳನ್ನು ಮಾತ್ರವಲ್ಲ, ನಮ್ಮ ಆಂತರಿಕ ಅಂಗಾಂಗಗಳನ್ನು ಮತ್ತು ಮುಖ್ಯವಾಗಿ ಬುದ್ಧಿಯನ್ನು ಚುರುಕುಗೊಳಿಸುತ್ತದೆ. ಸಿಕ್ಸ್ ಪ್ಯಾಕ್ (ಖಿಥ ಕಚಿಛಿಇ) ದೇಹಕ್ಕಿಂತ, ಪ್ರಶಾಂತವಾದ ಮನಸ್ಸು ಮತ್ತು ರೋಗಮುಕ್ತ ಶರೀರ ಮುಖ್ಯ ಎಂಬುದನ್ನು ಇಂದಿನ ಯುವಜನತೆ ಅರಿಯಬೇಕಿದೆ.

ಹಣ ಗಳಿಸುವ ಯಾವುದೇ ಆಸೆ ಇಲ್ಲದೆ ಸಮಾಜದ ಆರೋಗ್ಯಕ್ಕಾಗಿ ಜೀವ ತೇದು ಹೋಗುತ್ತಿರುವ ನನ್ನ ಗುರುಗಳಂತಹ ನಿಸ್ವಾರ್ಥ ಜೀವಿಗಳು ನಮ್ಮ ಸಮಾಜದ ನಿಜವಾದ ಆಸ್ತಿ! "ಆರೋಗ್ಯವೇ ಭಾಗ್ಯ" ಎಂಬ ಧ್ಯೇಯದೊಂದಿಗೆ ನಾವೆಲ್ಲರೂ ಯೋಗವನ್ನು ನಮ್ಮ ದಿನಚರಿಯ ಭಾಗವಾಗಿಸಿಕೊಳ್ಳೋಣ. ಆರೋಗ್ಯವಂತ ವ್ಯಕ್ತಿಯಿಂದ ಆರೋಗ್ಯವಂತ ಸಮಾಜ ಹಾಗೂ ಸದೃಢ ದೇಶ ನಿರ್ಮಾಣ ಸಾಧ್ಯ. ಯೋಗ ಮಾಡೋಣ, ಆರೋಗ್ಯವಾಗಿರೋಣ.ನಿಮ್ಮ ಊರುಗಳಲ್ಲಿಗೂ ಇಂಥ ಕೇಂದ್ರಗಳು ಇದ್ದೇ ಇರುತ್ತದೆ. ಅಲ್ಲಿಗೆ ಹೋಗಿ, ಎಲ್ಲ ರೀತಿಯಿಂದಲೂ ನಿಮ್ಮ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಿ.ನಿಮ್ಮ ಒತ್ತಡದ ಜೀವನದ ಮಧ್ಯೆ ನಿಮಗಾಗಿ ಕೆಲವು ನಿಮಿಷಗಳಾದರೂ ಕೊಡಿ. ನಿಮ್ಮ ಆರೋಗ್ಯಕ್ಕಾಗಿ ನೀವು ಹಾಕಿದ ಬಂಡವಾಳ ನಿಮಗೆ ಎಂದೂ ಮೋಸ ಮಾಡುವುದಿಲ್ಲ!

ನನ್ನ ಪೂಜ್ಯ ಗುರುಗಳ ಚರಣಗಳಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತಾ, ಜಗತ್ತಿನ ಎಲ್ಲಾ ನಿಸ್ವಾರ್ಥ ಯೋಗ ಗುರುಗಳಿಗೂ ನನ್ನ ಹೃದಯಾಂತರಾಳದ ವಂದನೆಗಳು.

